ನಾದಪಿಯಾ ಶ್ರೀ ನಾರಾಯಣ ಪಂಡಿತರ

ಅಭಿನವಭಾವ ಬಂದಿಶ

ಸಂಪಾದಕರು

ಡಾ. ಶಾರದಾ ವಿ. ಭಟ್ಟ

'A' Grade
NAAC Accredited 2008

ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೨೦೦೯

Nadapiya Shri Narayana Panditara ABHINAVABHAVA BANDISH
Edited by:*Dr. Sharada V.Bhat.* ***Published by:*** *Dr.Harilal Pawar Director, Publication, Karnatak University, Dharwad-580003.*

ಪ್ರಕಾಶಕರು :
ಡಾ.ಹರಿಲಾಲ ಪವಾರ
ನಿರ್ದೇಶಕರು, ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೩

© ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಪ್ರಥಮ ಮುದ್ರಣ : ೨೦೦೯

ಪ್ರತಿಗಳು : ೬೦೦

ಪುಟಗಳು :xxxii + ೧೨೫

ಬೆಲೆ : ೧೫೦-೦೦

ಮುದ್ರಕರು :
ಡಾ. ಹೆಚ್. ಎಂ. ಮಹೇಶ್ವರಯ್ಯ
ನಿರ್ದೇಶಕರು
ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ, ಧಾರವಾಡ-೩

ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯವು ಪ್ರಸಾರಾಂಗದ ಮುಖಾಂತರ ನಡೆಸುತ್ತಿರುವ ಜ್ಞಾನ ಪ್ರಸಾರ ಯೋಜನೆಗಳಲ್ಲಿ ವ್ಯಾಸಂಗ ವಿಸ್ತರಣ ಉಪನ್ಯಾಸ, ವಿಶೇಷ ವಾಙ್ಮಯ ಪ್ರಸಾರೋಪನ್ಯಾಸ ಹಾಗೂ ವಿಶೇಷ ಉಪನ್ಯಾಸಗಳು ಬಹುಮುಖ್ಯ ಹಾಗೂ ಜನಪ್ರಿಯವಾಗಿವೆ. ಈ ಉಪನ್ಯಾಸಗಳ ಮೂಲಕ ವಿಶ್ವವಿದ್ಯಾಲಯವು ತನ್ನ ಜ್ಞಾನ ಭಂಡಾರವನ್ನು ಜನರೆಡೆಗೆ ಕೊಂಡೊಯ್ಯುತ್ತಿದೆ.

ಈ ಎಲ್ಲ ಉಪನ್ಯಾಸಗಳನ್ನು ಪ್ರಸಾರಾಂಗವು ತನ್ನ ಇತರ ಗ್ರಂಥಗಳ ಪ್ರಕಟನೆಯ ಜತೆಗೆ ವಿವಿಧ ಮಾಲಿಗಳ ಅಡಿಯಲ್ಲಿ ಪ್ರಕಟಿಸುತ್ತ ಬಂದಿದೆ.

ಪ್ರಸ್ತುತ **'ನಾದಪಿಯಾ ಶ್ರೀ ನಾರಾಯಣ ಪಂಡಿತರ ಅಭಿನವಭಾವ ಬಂದಿಶ'** ಎನ್ನುವ ಈ ಕೃತಿಯು ಪ್ರಸಾರಾಂಗದ ಇತರ ಪ್ರಕಟನೆಗಳ ಅಡಿಯಲ್ಲಿ ಪ್ರಕಟವಾಗುತ್ತಿರುವುದು ಹೆಮ್ಮೆಯ ವಿಷಯ. ಈ ಗ್ರಂಥದಲ್ಲಿ ಎಂಬತ್ತೆರಡು ರಾಗಗಳ ಶ್ರೀ ನಾರಾಯಣ ಪಂಡಿತ ವಿರಚಿತ ನೂರೈವತ್ತೈದು ಬಂದಿಶಗಳಿವೆ.

ಮೂಲತ: ಪಿಟೀಲು ವಾದಕರಾಗಿದ್ದ ಶ್ರೀ ನಾರಾಯಣ ಪಂಡಿತರು ಶಾರೀರಿಕ ಅಸ್ವಸ್ಥತೆಯಿಂದ ಪಿಟೀಲು ವಾದನವನ್ನು ಕೈಬಿಟ್ಟು ಸ್ವಂತ ಊರಾದ ಗೋಕರ್ಣಕ್ಕೆ ಬಂದು, ಅನೇಕ ಸಾಂಪ್ರದಾಯಿಕ ಘರಾಣಾದಾರೀ ಬಂದಿಶಗಳನ್ನು ಸಂಗ್ರಹಿಸಿ, ಅಭ್ಯಸಿಸಿ, ಆಳವಾದ ಚಿಂತನೆ ನಡೆಸಿದರು. ಆ ಚಿಂತನೆಯ ಫಲವಾಗಿ 'ಹಲವು ಬಂದಿಶಗಳು ಕಾಲಬಾಹ್ಯವೂ, ಅರ್ಥಹೀನವೂ ಎನಿಸಿದವು. ಇನ್ನು ಕೆಲವು ರಚನೆಗಳು ತಲೆಮಾರುಗಳಿಂದ ಬಾಯಿಂದ ಬಾಯಿಗೆ ಹರಿದು ಬರುವಷ್ಟರಲ್ಲಿ ತಮ್ಮ ನೈಜರೂಪವನ್ನೇ ಕಳೆದುಕೊಳ್ಳುತ್ತವೆ ಎಂಬ ದೃಷ್ಟಿಯಿಂದ ಸ್ವಂತ ರಚನೆಗಳನ್ನು ರಚಿಸುವತ್ತ ಮನಸ್ಸು ಮಾಡಿ ಬೇರೆ ಬೇರೆ ರಾಗಗಳನ್ನು, ಅವುಗಳ ಬೇರೆ ಬೇರೆ ರೂಪಗಳನ್ನು ಪರಿಚಯಿಸಬೇಕೆಂದು ಅನೇಕ ಬಂದಿಶಗಳನ್ನು ಬರೆದೆ' ಎಂದು ಶ್ರೀ ನಾರಾಯಣ ಪಂಡಿತರೇ ಈ ಕೃತಿಯ ಮೊದಲು ಹೇಳಿಕೊಂಡಿದ್ದಾರೆ. ಶ್ರೀ ನಾರಾಯಣ ಪಂಡಿತರ ಅನುಭವ ಮತ್ತು ಚಿಂತನೆಯ ಫಲವಾಗಿ ಮೂಡಿ ಬಂದ ಈ ರಾಗಗಳು(ಬಂದಿಶಗಳು) ಸಂಗೀತ ಕ್ಷೇತ್ರಕ್ಕೆ ಅವರು ನೀಡಿದ ನೂತನ ಕೊಡುಗೆಗಳೆಂದೇ ಹೇಳಬಹುದು.

ಸಂಗೀತ ಕ್ಷೇತ್ರದಲ್ಲಿ ಉದಯೋನ್ಮುಖ ಸಂಗೀತಗಾರ್ತಿಯಾಗಿ ಹೆಸರು ಮಾಡಿರುವ ಡಾ.(ಶ್ರೀಮತಿ) ಶಾರದಾ ವಿ. ಭಟ್ಟ ಅವರು ಈ ಕೃತಿಯ ಸಂಪಾದಕರಾಗಿದ್ದಾರೆ. ಅವರಿಗೆ ವಿಶ್ವವಿದ್ಯಾಲಯದ ಪರವಾಗಿ ಕೃತಜ್ಞತೆಗಳು. ಜೊತೆಗೆ ಈ ಕೃತಿಯ ಬಂದಿಶಗಳನ್ನು ರಚಿಸಿ ಸಂಪಾದಿಸಲು ಅನುಮತಿ ನೀಡಿ ಸಹಕರಿಸಿದ ಶ್ರೀ ನಾರಾಯಣ ಪಂಡಿತರಿಗೆ ವಿಶ್ವವಿದ್ಯಾಲಯದ ಪರವಾಗಿ ತುಂಬು ಹೃದಯದ ಧನ್ಯವಾದಗಳು. ಹಾಗೆಯೇ ಈ ಕೃತಿಯನ್ನು ಪ್ರಕಟಿಸಿದ ಪ್ರಸಾರಾಂಗದ ನಿರ್ದೇಶಕರಿಗೆ, ಮುದ್ರಿಸಿದ ಮುದ್ರಣಾಲಯದ ನಿರ್ದೇಶಕರಿಗೆ ಹಾಗೂ ಸಿಬ್ಬಂದಿ ವರ್ಗದವರಿಗೆ ಧನ್ಯವಾದಗಳು. ತುಂಬಾ ಸುಂದರವಾಗಿ ಮೂಡಿಬಂದ ಈ ಕೃತಿ ಯುವ ಸಂಗೀತಗಾರರಿಗೆ ಸ್ಫೂರ್ತಿಯನ್ನು ನೀಡಲಿ ಎಂದು ಹಾರೈಸುತ್ತೇನೆ.

ಪ್ರೊ.ಎಸ್.ಕೆ.ಸೈದಾಪುರ

ಎಫ್.ಎ.ಎಸ್ ಸಿ., ಎಫ್ ಎನ್ ಎ

ಕುಲಪತಿಗಳು

ಭೂಮಿಕೆ

ನಾನು ಮೂಲತಃ ಪಿಟೀಲು ವಾದಕನಾಗಿದ್ದು, ಮೊದಲಿನಿಂದಲೂ ಬಂದಿಶಗಳ ಬಗ್ಗೆ , ಗಾಯಕೀ ಅಂಗದ ವಾದನದ ಬಗ್ಗೆ ಪ್ರೀತಿಯಿದ್ದವನು. ನನ್ನ ತಂದೆಯವರಾದ ಸ್ವರ್ಗೀಯ ವಿಘ್ನೇಶ್ವರ ಪಂಡಿತರು ಬೊಂಬಾಯಿಯಲ್ಲಿ, ಪಂಡಿತ ಬಿ.ಆರ್.ದೇವಧರ ಅವರ ಸಂಗೀತ ಶಾಲೆಯಲ್ಲಿ ಪಿಟೀಲು ಶಿಕ್ಷಕರಾಗಿದ್ದರು. ಇವರು ಪಿಟೀಲು ವಾದನದಲ್ಲಿ ಕೆಲವು ಹೊಸ ಪ್ರಯೋಗಗಳನ್ನು ಮಾಡಿದ್ದಾರೆ. ನನಗೆ ನನ್ನ ಬಾಲ್ಯದಲ್ಲಿಯೇ ತಂದೆಯವರಿಂದ ಸಂಗೀತ ಶಿಕ್ಷಣ ದೊರೆಯಿತು ಹಾಗೂ ಪಂಡಿತ ದೇವಧರರ ಸಂಗೀತ ಶಾಲೆಗೆ ಬರುವ ಅನೇಕ ಖ್ಯಾತ-ಶ್ರೇಷ್ಠ ವಾದಕ-ಗಾಯಕರ ಸಂಗೀತ ಕಚೇರಿಗಳನ್ನು ಆಲಿಸುವ ಸದವಕಾಶ ದೊರೆಯಿತು.

ಹಿಂದುಸ್ತಾನೀ ಸಂಗೀತಕ್ಕೆ ಹೊಸ ಆಯಾಮವನ್ನೇ ನೀಡಿದ ನನ್ನ ಗುರುಗಳಾದ ಸ್ವರ್ಗೀಯ ಪಂಡಿತ ಕುಮಾರ ಗಂಧರ್ವರ ಸಾಂಗತ್ಯ ನನಗೆ ೪೦ ವರ್ಷಗಳ ಕಾಲ ದೊರೆತಿದೆ. ಅವರ ಅದೆಷ್ಟೋ ಪ್ರಯೋಗಗಳನ್ನು ಬಹಳ ಹತ್ತಿರದಿಂದ ನೋಡಲು, ಅಭ್ಯಸಿಸಲು ಅವಕಾಶ ಸಿಕ್ಕಿದ್ದು, ಸಂಗೀತದಲ್ಲಿಯ 'ಭಾವಸೌಂದರ್ಯವಾದ' ಹಾಗೂ ರಚನೆಗಳ ಬಗೆಗಿನ ಒಲವು ಬೆಳೆಯುತ್ತಾ ಬಂದಿತು.

೧೯೯೦ರ ಆಸುಪಾಸಿನಲ್ಲಿ ಶಾರೀರಿಕ ಅಸ್ವಸ್ಥತೆಯಿಂದ ಸ್ವಂತ ಊರಾದ ಗೋಕರ್ಣಕ್ಕೆ ಬರಬೇಕಾಯಿತು. ಪಿಟೀಲು ವಾದನವನ್ನೇ ಬಿಡಬೇಕಾದ ಅನಿವಾರ್ಯತೆ ಉಂಟಾಯಿತು. ಧೃತಿಗೆಡಬಾರದೆಂದುಕೊಂಡು ಕೆಲವರಿಗೆ ಕಂಠಸಂಗೀತ(ಗಾಯನ) ಕಲಿಸಲು ಶುರುಮಾಡಿದೆ. ಅನೇಕ ಸಾಂಪ್ರದಾಯಿಕ, ಘರಾಣದಾರೀ ಬಂದಿಶಗಳನ್ನು ಸಂಗ್ರಹಿಸಿ, ಅಭ್ಯಸಿಸಿ, ಅವುಗಳ ಮೇಲೆ ಚಿಂತನೆ ಮಾಡಿದ್ದ ನನಗೆ ಭಾವಸೌಂದರ್ಯದ ದೃಷ್ಟಿಯಿಂದ ಹಲವು ಕಾಲಬಾಹ್ಯವೂ, ಅರ್ಥಹೀನವೂ ಎನಿಸಿದವು. ಅಭಿಜಾತತೆಯ ದೃಷ್ಟಿಯಿಂದ ನೋಡಿದಾಗ, ಕೆಲವು ರಚನಾಕಾರರ ಭಾಷೆಯ ಮೇಲಿನ ಅಪ್ರಬುದ್ಧತೆಯಿಂದಾಗಿ, ಹಲವು ಭ್ರಷ್ಟರೂಪದ ಬಂದಿಶಗಳು ರಚಿತವಾದುವು. ಉದಾಹರಣೆಗೆ, ಮಧುವಾ ಭರಲಾದೆ (ರಾಗ ದರ್ಬಾರಿ ಕಾನ್ಹಡಾ), ಪ್ಯಾಲಾ ಮುಝು ಭರದೇ (ರಾಗ ಭೈರವ), ರಂಗರಲಿಯಾ ಕರ ಸೌತನ ಸಂಗ (ರಾಗ ಮಾಲಕೌಂಸ), ಮುಂತಾದವುಗಳು.ಇನ್ನು ಕೆಲವು ಒಳ್ಳೆಯ ರಚನೆಗಳು ತಲೆಮಾರುಗಳಿಂದ ಬಾಯಿಂದ ಬಾಯಿಗೆ ಹರಿದು ಬರುವಷ್ಟರಲ್ಲಿ ತಮ್ಮ ನೈಜ ರೂಪವನ್ನೇ ಕಳೆದುಕೊಂಡಿವೆ. ಇನ್ನೂ ಅನೇಕ ರಚನೆಗಳಲ್ಲಿ ದೇವರ ವರ್ಣನೆ, ಶೃಂಗಾರ-ಭಕ್ತಿ ರಸಗಳ ಕಲ್ಪನೆಯನ್ನು ಬಿಟ್ಟರೆ, ಜೀವನದ ಅದೆಷ್ಟೋ ವಿಚಾರಗಳ ಮೇಲಿನ ಸಮೃದ್ಧತೆ ಕಂಡುಬರುವುದಿಲ್ಲ. ಇದರ ಹೊರತಾಗಿ, ನಮ್ಮಲ್ಲಿಯ ವಿದ್ಯಾರ್ಥಿಗಳಿಗೆ ಹಿಂದಿ, ಬೃಜ ಭಾಷೆಗಳಲ್ಲಿರುವ ಉತ್ತರ ಭಾರತದ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ರಚನೆಗಳ ಅರ್ಥವನ್ನು ಹೇಳುವುದು ಕಷ್ಟಸಾಧ್ಯವೆನಿಸುತ್ತಿತ್ತು. ಇವೆಲ್ಲ ವಿಚಾರಗಳಿಂದಾಗಿ, ಸ್ವಂತ ರಚನೆಗಳನ್ನು ರಚಿಸುವ ಭೂಮಿಕೆ ನನ್ನದಾಯಿತು. ಈ ಮುಖೇನ ನನ್ನಲ್ಲಿ ಬರುವ ವಿದ್ಯಾರ್ಥಿಗಳಿಗೆ ರಾಗಗಳನ್ನು, ಅವುಗಳ ಬೇರೆ ಬೇರೆ ರೂಪಗಳನ್ನು ಪರಿಚಯಿಸಬೇಕೆಂದುಕೊಂಡು ಅನೇಕ ಬಂದಿಶಗಳನ್ನು ಬರೆದೆ.

ಇವುಗಳನ್ನು ಕಲಿತವರು, ಶ್ಲಾಘಿಸಿದವರು ಅನೇಕರು. ಅವರಲ್ಲಿ, ಮೂರು ವರ್ಷಗಳ ಹಿಂದೆ ನನ್ನಲ್ಲಿ ಕೆಲವು ರಚನೆಗಳನ್ನು ಕಲಿಯಲೆಂದು ಬಂದ ಡಾ.(ಶ್ರೀಮತಿ) ಶಾರದಾ ವಿ. ಭಟ್ಟ, ವೃತ್ತಿಯಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಸಂಖ್ಯಾಶಾಸ್ತ್ರ ವಿಭಾಗದಲ್ಲಿ ಪ್ರವಾಚಕರಾಗಿದ್ದು, ಪ್ರವೃತ್ತಿಯಲ್ಲಿ ಸಂಗೀತವನ್ನು ನೆಚ್ಚಿಕೊಂಡು, ಅಖಿಲ ಭಾರತೀಯ ಗಂಧರ್ವ ಮಹಾವಿದ್ಯಾಲಯ ಮಂಡಲ, ಮುಂಬೈ, ನಡೆಸುವ 'ಸಂಗೀತಾಲಂಕಾರ'ದಲ್ಲೂ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ. ನನ್ನ ಅನೇಕ ಬಂದಿಶಗಳನ್ನು ಸಂಪಾದಿಸುವಲ್ಲಿ ಪರಿಶ್ರಮಿಸಿ, ಅವುಗಳನ್ನು ಸಭಿಕರೆದುರು ಹಾಡಿ 'ಸೈ' ಎನಿಸಿಕೊಂಡಿದ್ದಾರೆ. ಈ ಪುಸ್ತಕದಲ್ಲಿಯ ಬಂದಿಶಗಳಿಗೆ, ತಾವೇ ಕಂಡುಹಿಡಿದ ಹೊಸದಾದ, ಸುಲಭೀಕರಣಗೊಳಿಸಿದ ಸ್ವರಲಿಪಿಯನ್ನು ಸಂಯೋಜಿಸುವಲ್ಲಿ ಸಫಲರಾಗಿದ್ದಾರೆ. ಇಲ್ಲಿಯತನಕ ನಾನು ಬರೆದ ಎಲ್ಲ ಬಂದಿಶಗಳನ್ನು ಸಂಗ್ರಹಿಸಿ, ಸಂಪಾದಿಸಿ, ಪ್ರಕಟಿಸುವಲ್ಲಿ ಸರ್ವ ಪ್ರಯತ್ನ-ಗಳನ್ನು ಮಾಡುವ ಉತ್ಸುಕತೆ ತೋರಿ ಕಾರ್ಯರೂಪಗೊಳಿಸಿದ ನನ್ನ ಈ ನೆಚ್ಚಿನ ಶಿಷ್ಯೆಗೆ ಶುಭಾಶಯಗಳನ್ನು ಕೋರುತ್ತೇನೆ.

ಹಿರಿಯ ಗಾಯಕ ಮಿತ್ರರೂ, ಸಹೃದಯರೂ ಆಗಿರುವ ಪಂ.ಚಂದ್ರಶೇಖರ ಪುರಾಣಿಕಮಠ ಅವರು, ತನ್ನ ಆತ್ಮೀಯ ಶಿಷ್ಯೆ ಶಾರದಾ ಭಟ್ಟರಿಗೆ ಈ ಕೆಲಸ ಮಾಡಲು ತುಂಬು ಮನಸ್ಸಿನಿಂದ ಆಶೀರ್ವದಿಸಿ, ಪ್ರೋತ್ಸಾಹಿಸಿದ್ದಕ್ಕಾಗಿ ಅವರಿಗೆ ನನ್ನ ವಂದನೆಗಳು. ಶಾರದಾ ಭಟ್ಟರು ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ವಿಶ್ವವಿದ್ಯಾಲಯವೇ ಅವರ ಇನ್ನೊಂದು ಕ್ಷೇತ್ರವನ್ನು ಗುರುತಿಸಿ, ಇದನ್ನು ಪ್ರಕಟಿಸಲು ಉತ್ಸಾಹ ತೋರಿದ್ದು 'ಸೋನೆ ಪೆ ಸುಹಾಗಾ' ಎಂಬಂತಾಗಿದೆ. ಕರ್ನಾಟಕ ವಿಶ್ವವಿದ್ಯಾಲಯದ ಪದಾಧಿಕಾರಿಗಳಿಗೆ, ವಿಶೇಷತಃ ಇಲ್ಲಿಯ ಪ್ರಸಾರಾಂಗದ ನಿರ್ದೇಶಕರಾದ ಡಾ. ಹರಿಲಾಲ ಪವಾರರಿಗೆ ನನ್ನ ಧನ್ಯವಾದಗಳು.

ಕರ್ನಾಟಕದಲ್ಲಿ ಹುಟ್ಟಿ, ಇಲ್ಲಿಯ ಹಿಂದುಸ್ತಾನೀ ಸಂಗೀತಕ್ಕೆ ಈ ಗ್ರಂಥ ಮುಖೇನ ಯೋಗದಾನ ಮಾಡಿ, ವಾಗ್ಗೇಯಕಾರನ ಕಠಿಣ ಭೂಮಿಕೆಯನ್ನು ನಿರ್ವಹಿಸುವಲ್ಲಿ ಸಫಲತೆಯನ್ನು ಕಾಣುತ್ತೇನೆ. ನನಗಿಲ್ಲಿ ಬೇಕಾಗಿರುವುದು ಧನಲಾಭವಲ್ಲ, ನಾನು ನನ್ನ ಜೀವಿತದಲ್ಲಿ ಗಳಿಸಿದ ಜ್ಞಾನದ ಸದ್ಬಳಕೆಯಷ್ಟೆ. ಇಲ್ಲಿಯ ಸಂಗೀತಯೋಗಿಗಳೂ, ಗುನಿಜನರೂ, ಶ್ರೋತೃಗಳೂಇದನ್ನು ಸ್ವಾಗತಿಸಿ, ಅವರದಾಗಿಸಿಕೊಂಡರೆ ಕೃತಾರ್ಥನಾಗುತ್ತೇನೆ. ನನ್ನಿಂದ ರಚಿತವಾದ ಬಂದಿಶಗಳು ಸಂಗೀತಲೋಕಾರ್ಪಣಗೊಳ್ಳುತ್ತಿರುವುದು ನನಗೆ ಮಹದಾನಂದವನ್ನು ತಂದಿದೆ.

ಧಾರವಾಡ

೨೧-೫-೨೦೦೭

- ಶ್ರೀ ನಾರಾಯಣ ಪಂಡಿತ

ಪರಿವಿಡಿ

ಮುನ್ನುಡಿ	-	ಪ್ರೊ.ಎಸ್.ಕೆ.ಸೈದಾಪುರ	-	iii
ಭೂಮಿಕೆ	-	ಶ್ರೀ ನಾರಾಯಣ ಪಂಡಿತರು	-	v
ಒಳಪೊಗುವ ಮುನ್ನ	-	ಡಾ. ಶಾರದಾ ವಿ. ಭಟ್ಟ	-	xiii

ಶ್ರೀ ನಾರಾಯಣ ಪಂಡಿತರ ಬಂದಿಶಗಳು

ರಾಗಗಳು	***ಬಂದಿಶ***		***ಪುಟಗಳು***
ಭೈರವ	ಭೋರಹೀ ಆವೆ	-	೧
	ಆಜ ಮೇರೆ ಘರ		
	ಗಾಊ ತೋರೆ ಸಂಗ		
ರಾಮಕಲೀ	ದೇಖೋ ನಿಕಸೀ ಆಯೋ	-	೩
ಶಿವಮತ್ ಭೈರವ	ಗೀತ ಜಗಾಯ ಮೇರೆ	-	೪
	ಕೈಸೊ ಭೋಡದಿಯೋ		
ಬೈರಾಗಿ ಭೈರವ	ಅಕೇಲೀ ಮೈ ರಾಹೀ	-	೬
	ಡಗರ ಚಲತ		
ಅಹೀರ ಭೈರವ	ಆಯೆ ದಿನ ಅಬ	-	೭
	ಮನ ಬಸಗಯೋರೀ		
ನಟ ಭೈರವ	ಮೈಂ ತೋ ಹಾರೀ ರೇ	-	೯
ಬಿಭಾಸ	ಜೋತ ಜಾಗೀ ರೀ	-	೯
	ರೈನ ಬೀತ ಗಯೀ		
ಗುಜರೀ ತೋಡೀ	ಆಜ ಮನ ಮೇರೋ	-	೧೧
	ಕೈಸೆ ತುಮ ಸಮಝಾಊ		
ತೋಡೀ	ಘರ ಡಗರ ದೀಪ ಜಲೀ	-	೧೩
ಲಲಿತ	ಬೈಠೀ ಮೈ ಧ್ಯಾನ ಮೇ	-	೧೪
	ತುಮ ಶಿವರೂಪ		
	ಭೋರ ಭಈ ಶಾಮ		
	ತನನ ದಿರ್ ದಿರ್ ತಾನ		

ಕೋಮಲರಿಷಭ ಆಸಾವರೀ	ತುಮಬಿನ ಕೌನ	-	೧೬
ಜೀವನಪುರೀ	ಮೈ ತೋಹೆ ಭೂಲ	-	೧೭
ಭಟಿಯಾರ	ಯಹೀ ರೂಪ	-	೧೮
	ಸಬ ಜಗ ಆಜ		
ಶುದ್ಧ ಸಾರಂಗ	ತಪರಿಯಾ ಭೂಮರೀ	-	೨೦
	ಬೇಕಲ ಜಿಯಾ ಹೋತ		
	ದಿರ್ ದಿರ್ ತನ ದೇರೆನಾ		
ವೃಂದಾವನೀ ಸಾರಂಗ	ಗುಂದ ಲಾವೋ	-	೨೨
	ಘನಘೋರ ಛಾಯೀ		
ಮಧಮಾದ ಸಾರಂಗ	ಬಾದಲ ಬರಸನ	-	೨೪
	ಗರಜ ಗರಜತ ಆಯೋ		
ದೇಸೀ	ಮೇರೋ ಮನ ಭಾಯೇ	-	೨೫
	ಜಾಊ ಮೈ ತೋರೆ ಸಂಗ		
	ಬಹುತ ನಾ ಬೋಲೋ		
ಮೂಲತಾನೀ	ಸಾಂಜ ಭಈ ಡರ ಮೋಹೆ	-	೨೮
ಮಧುವಂತೀ	ಮಿತವಾ ಆನ ಮಿಲೋರೀ	-	೨೯
	ತುಮಬಿನ ತರಸ ರಹೀ		
ಮಾರವಾ	ತೇರೋ ಹೀ ಧ್ಯಾನ	-	೩೦
	ಏರೀ ಲರೂಂಗೀ ಆಜ		
ಪುರಿಯಾ	ಮೃಗ ನಯನೀ ತೋರೆ	-	೩೨
ಶ್ರೀ	ಸಾಂಜ ಭಈ ಉಗಿಯೋ	-	೩೩
	ಆವೋ ಆವೋ ಆವೋ		
ಪುರಿಯಾ ಧನಾಶ್ರೀ	ಸೂರಜ ಡೂಬ ಗಯೋರೀ	-	೩೪
	ಮೋರಾ ಮೋರಾ ರೇ		
ಭೀಮಪಲಾಸೀ	ಮೈ ತೋ ಜಾಗೀ	-	೩೬
	ಝೂಟೀ ಬತಿಯಾ		
	ತನನ ದಿರ್ ದಿರ್		
ಧಾನೀ	ಮೋಹನ ಮಧು ಬನ	-	೩೮
ಶುದ್ಧ ಕಲ್ಯಾಣ	ಬಾಜನ ಬಾಜೇರಿ	-	೩೯
	ಶಾಮ ಢಲೇ ಸಖಿ		
ಶ್ಯಾಮ ಕಲ್ಯಾಣ	ಥಕೇ ನೈನ ಹಮಾರೆ	-	೪೧
	ಮೋರಾ ಮನ ಹರಲೀನೋ		
	ತನನ ದೇರೆನಾ ದಿಮ್ತ		

ಕಲ್ಯಾಣ	ಮಾಈ ತೂ ಜಾನತ	-	೪೩
	ರೂಪ ಗುಣ ಗಾಊ		
	ಲಾಲ ಮೇರೋ ನಾ		
	ಪಿಯಾ ಆಜ ಮೇರೆ		
	ದಿಮ್ ದಾರಾ ದಿಮ್		
	ತನಾ ದೆರೆನಾ ದಾನಿ		
ಬಿಹಾಗ	ತೂ ಮೋಹಮಯೀ	-	೪೭
	ಮೇರೆ ಮನ ಕೀ ಬಾತ		
	ಪಿಯಾ ಮೈ ತೋಪೆ		
	ದಿರ್ ದಿರ್ ತಾನ		
ಬಿಹಾಗಡಾ	ಮನ ಹರಲೀನೋ ಬಾವರೀ	-	೫೦
	ಕೈಸೇ ಧರೂ ಧೀರ		
ಮಾರುಬಿಹಾಗ	ಅಂಖಿಯಾಂ ತರಸರಹೀ	-	೫೧
	ಸುನೋ ಸಖಿ ಆಜ		
	ಪಿಹರವಾ ಜಾಗೀ		
	ಮೋರಾ ಮನ ಮಾನೆ		
ನಂದ	ಏ ಜೋ ರೂಪ ಬನೇ	-	೫೫
	ಜಾರೇ ಜಾರೇ ಜಾ		
	ದಿಮ್ ದಾರಾ ತನನ		
ಭೂಪ	ನಜರಾ ನ ಲಾಗೆ	-	೫೭
	ಲಾಲನ ಮೇರೋ		
	ತನನ ದೆರೆನಾ ದಿಮ್		
	ಉದತನ ದಿಮ್ ತನನ		
ಜೋಗ	ಜಿಯರಾ ಮಾನತ	-	೬೦
	ಬಾಲಮುವಾ ಆಯೋ		
	ಝೂಮ ಝೂಮ		
ಜಯಜಯವಂತೀ	ಗುನಿ ಜನ ಕೋ ಬಖಾನ	-	೬೧
	ತೋಪೆ ವಾರಿ ಜಾಊ		
ಹಂಸಧ್ವನಿ	ತನನ ದೆರೆನಾ ತನನನ	-	೬೪
ಶಂಕರಾ	ತರಸತ ಮನ ದರಸನ	-	೬೫
	ತನನನ ತನತ ದಿಮ್		
ಕೇದಾರ	ಢಪಕೀ ಧುಕಾರೆ	-	೬೬

	ನೇಹಾ ಲಗಾಯ ಮೈ		
	ನಾ ಡಾರೋ ನಾ ಡಾರೋ		
ಹಮೀರ	ಆಂಸ ಲಗೀ ರೀ ಗುರು	-	೬೯
	ಲಗನ ಮೋಹೆ ಲಾಗೀ		
	ಸಖಿ ವಾರೀ ಜಾಊ		
	ಜಾಗೀ ರೇ ಜಾಗೀ ಮೈ		
ಛಾಯಾನಟ	ತೋರೆ ಸಂಗ ಪಿಯಾ	-	೭೨
ಕಾಮೋದ	ಸೋ ಜಾನು ಮೈ ಜಾನು	-	೭೨
ದುರ್ಗಾ	ಏರೀ ಮದ ನಾ ಕರೋ	-	೭೩
	ನೀಕೋ ಲಾಗೆ ಮಾಂ		
ಝಿಂಝೋಟೀ	ಸಖಿ ಹಮರೀ ಮೀತ	-	೭೫
	ರೇಶಮ ಕೀ ಡೋರ		
ಸೋಹೋನೀ	ಭೂಲನಾ ಪಾಊ	-	೭೬
ಬಾಗೇಶ್ರೀ	ಆಜ ಧನ ಧನ ಭಾಗ	-	೭೭
	ಸಾವನ ಪಿಯಬಿನ		
	ತನ ನನ ನನ ತನೊಮ್		
ರಾಗೇಶ್ರೀ	ಫೂಲ ಮೈ ಲಾಯಿ	-	೭೯
	ಸುಹಾನೀ ಲುಭಾನೀ		
ದರಬಾರೀ ಕಾನಡಾ	ಸುಮಿರನ ರಾಮ	-	೮೧
	ಸುಂದರ ಶ್ಯಾಮ		
ಕಾಫೀ ಕಾನಡಾ	ತುಮಬಿನ ಕೌನ	-	೮೨
	ನಾ ಮೈ ಬೋಲುಂಗೀ		
ಕೌಂಸೀ ಕಾನಡಾ	ಆವೋ ಸಾಜನ	-	೮೪
	ಸುಖ ದುಖ ಕೇ		
ನಾಯಕೀ ಕಾನಡಾ	ಕೈಸೀ ರೀತ ತೋರೀ	-	೮೫
ಸುಹಾ ಸುಘರಾಈ	ಖೇಲತ ಬ್ರಿಜ ರಾಜ	-	೮೬
ಮಾಲಕೌಂಸ	ಕೈಸೇ ಸಮಝಾಊಂ	-	೮೭
	ಸಾಂವರಿಯಾ ನಹೀಂ		
	ತಾನ್ ದೆರೆನಾ		
ಚಂದ್ರಕೌಂಸ	ಮನ ಕೀ ಬಾತ ಮನ	-	೮೯
	ಜಾರೇ ಜಾರೇ ಪಥಿಕವಾ		
	ಶರದ ಕೀ ರಾತ ಚಾಂದ		

ಮಧುಕೌಂಸ	ತುಮಬಿನ ಕೈಸೇ	-	೯೧
	ಮುರಲಿಯಾ ಬಾಜಿ		
ಜೋಗಕೌಂಸ	ನಿರಂಜನ ನಿರಾಕಾರ	-	೯೩
	ಸಾಂವರಿಯಾ ಸಪನೇ		
ಭೈರವೀ	ಸಾಂವರಿಯಾನೆ ಬೀನ	-	೯೪
	ಮೇರೋ ಪ್ರಣಾಮ		
	ಮುರಲೀ ಬೈರನ ಭಈ		
ಬಸಂತ	ಆಯೋ ಬಸಂತ ರಿತು	-	೯೭
ಬಹಾರ	ಡಮರು ಡಿಮ ಡಿಮತ	-	೯೭
ಮಿಯಾ ಮಲ್ಹಾರ	ಘಟಾ ಘನ ಘೋರ	-	೯೮
	ಐಸೋ ಕೈಸೋ ಬರಸೇ		
	ದಾನಿ ದಿಮ್ತ ದಿಮ್ತ		
ಗೌಡ ಮಲ್ಹಾರ	ಬಿಜಲಿಯಾ ದಮಕೇ	-	೧೦೧
	ದಿಮಿತ ದಿಮಿತ ನಾಚೇ		
ಸೂರ ಮಲ್ಹಾರ	ಪಾಲನಾ ಝುಲಾವೆ	-	೧೦೩
ರಾಮದಾಸೀ ಮಲ್ಹಾರ	ಲಾಲಚೀ ಮನ ಹಮಾರೆ	-	೧೦೩
ದೇಸಮಲ್ಹಾರ	ಮೋರೀ ಬಾತ ಮಾನಲೇ	-	೧೦೪
ದೇವಗಿರಿ ಬಿಲಾವಲ	ಮನ ಮೇ ಸಮಾಯ	-	೧೦೫
ಗೋರಖ ಕಲ್ಯಾಣ	ದೇವ ಮಹಾದೇವ	-	೧೦೬
ಗೌರೀ(ಕಾಲಿಂಗಡಾ ಅಂಗ)	ಭೋರಹೀ ಕೌನ	-	೧೦೬
ಗೌರೀ(ಪೂರ್ವೀ ಅಂಗ)	ವಾರೀ ವಾರೀ ಮೈ	-	೧೦೭
ಗಾಂಧಾರೀ	ಆಜ ಆನಂದ ನಂದ	-	೧೦೮
ದೇವಗಾಂಧಾರ	ನೀಂದರುವಾ ಆವೆ ನಾ	-	೧೦೯
ಮಾಲಗುಂಜೀ	ರುಣುಕ ಝುಣುಕ ಬಾಜಿ	-	೧೦೯
ಕೇದಾರನಂದಾ	ದೇಖೋ ಸಖೀ ಆಜ	-	೧೧೧
ಲಂಕಾದಹನ ಸಾರಂಗ	ಜಬಸೇ ದೇಖೀ ಸಿಯಾ	-	೧೧೧
ಪಂಚಮ	ಹೋರೀ ಖೇಲನ ಕೈಸೆ	-	೧೧೨
	ತುಮ ಬಿನ ಕಛು ನ		
ಪಟಮಂಜರಿ	ಗಾನ ಕರ ರಾಗ ತಾಲ	-	೧೧೩
ಕಾಫೀ	ಜಾನೀ ಚತುರಾಈ	-	೧೧೪
ಪಿಲು(ಕಾಫೀ ಅಂಗ)	ಶಾಮ ಢಲೇ ತುಮ	-	೧೧೫
ಪಿಲು(ಖಮಾಜ ಅಂಗ)	ಕೌನ ಗಲಿಸೇ ನಿಕಲು	-	೧೧೫

ಖಮಾಜ	ಕೈಸೀ ಬೀನ ಬಜಾಯೀ	-	೧೧೬
ಮಾಂಝು ಖಮಾಜ	ಸಪುನೆ ಮೇ ಆಯೋ	-	೧೧೭
	ನೈಯ್ಯಾ ಮೋರಿ ಕೈಸೇ		
ಸಿಂಧೂರಾ	ಹೋರೀ ಖೇಲತ ನಂದ	-	೧೧೮
ತಿಲಕ ಕಾಮೋದ	ಸೈಂಯಾರೆ ಕೈಸೇ ಧರೂ	-	೧೧೯
ದೇಸ	ಪೈಂಯಾ ಪರೂ ತೋರೆ	-	೧೨೦
ಪರಿಶಿಷ್ಟ-೧	ಚಿಹ್ನೆಗಳ ಪರಿಚಯ	-	೧೨೧
ಪರಿಶಿಷ್ಟ-೨	ಬಳಸಿದ ತಾಳಗಳು	-	೧೨೩
ಪರಿಶಿಷ್ಟ-೩	ಆಧಾರ ಸೂಚಿ	-	೧೨೫
ಪರಿಶಿಷ್ಟ-೪	ಭಾವಚಿತ್ರಗಳು	-	೧೨೬

ಒಳಪೊಗುವ ಮುನ್ನ

'ನಾದಪಿಯಾ, ಶ್ರೀನಾರಾಯಣ ಪಂಡಿತರ ಅಭಿನವಭಾವ ಬಂದಿಶ್' ಎಂಬ ಈ ಗ್ರಂಥದಲ್ಲಿ ಎಂಭತ್ತೆರಡು ರಾಗಗಳ ಶ್ರೀನಾರಾಯಣ ಪಂಡಿತ ವಿರಚಿತ ನೂರೈವತ್ತೈದು ಬಂದಿಶಗಳಿವೆ. 'ಪ್ರಸ್ಕೃತಿ'ಯಲ್ಲಿ ಪಂಡಿತರ ಸೃಜನಶೀಲ ವ್ಯಕ್ತಿತ್ವ ನಿರೂಪಣೆಯ ಪ್ರಯತ್ನವನ್ನು ಮಾಡಲಾಗಿದೆ. ಅವರದೇ ಆದ ಹಲವು ಬಂದಿಶಗಳ ಬಗೆಗೆ ಚರ್ಚಿಸಿದೆ.

ಈ ಗ್ರಂಥದಲ್ಲಿರುವ ರಚನೆಗಳನ್ನು ಓದಿಕೊಳ್ಳಲು ಸಹಾಯವಾಗುವಂತೆ, ಅವುಗಳನ್ನು ಬರೆಯಲು ಬಳಸಿದ ಸ್ವರಲಿಪಿಯಲ್ಲಿ ಬರುವ ಚಿಹ್ನೆಗಳನ್ನು ಪರಿಶಿಷ್ಟ-೧ ರಲ್ಲಿಯೂ, ತಾಳಗಳ ಪರಿಚಯವನ್ನು ಪರಿಶಿಷ್ಟ-೨ ರಲ್ಲಿಯೂ, ಅವರಿಗೆ ಸಂಬಂಧಿಸಿದ ಭಾವಚಿತ್ರಗಳನ್ನು ಪರಿಶಿಷ್ಟ-೪ರಲ್ಲಿಯೂ ನೀಡಲಾಗಿದೆ. ಬಂದಿಶಗಳ ಸ್ಥೂಲಾರ್ಥ ಹಾಗೂ ಕೆಲವು ಪದಗಳ ಅರ್ಥಗಳನ್ನು ಗೀತೆಗಳ ಕೆಳಗೆ ಸಣ್ಣ ಅಕ್ಷರಗಳಲ್ಲಿ ನೀಡಲಾಗಿದೆ.

ಇನ್ನೊಂದು ಗಮನಿಸಲೇಬೇಕಾದ ಮುಖ್ಯ ವಿಚಾರ-ಯಾವ ಗೀತೆಗಳ ಕೆಳಗೆ ಸ್ಥೂಲಾರ್ಥವನ್ನು ನೀಡಲಾಗಿಲ್ಲವೋ ಅವುಗಳ ಬಗೆಗಿನ ಮಾಹಿತಿಗಳನ್ನು ಪರಿಶಿಷ್ಟ-೩ರಲ್ಲಿ ಕೊಡಲಾಗಿದೆ.

ಸಂಗೀತದಲ್ಲಿಯ ಜ್ಞಾನಾರ್ಜನೆಗೆ ನನಗೆ ಹೆಚ್ಚಿನ ಪ್ರೋತ್ಸಾಹ ನೀಡಿದ, ನೀಡುತ್ತಿದ್ದ ಪಂ.ಚಂದ್ರಶೇಖರ ಪುರಾಣಿಕ ಮಠರಿಗೂ, ತಮ್ಮಿಂದ ರಚಿತವಾದ ಬಂದಿಶಗಳ ಜೊತೆಗೇ, ಅವುಗಳಲ್ಲಿಯ ಭಾವಸೌಂದರ್ಯವನ್ನು ಪರಿಚಯಿಸಲು ಇನ್ನೂ ಅನೇಕ ಸಾಂಪ್ರದಾಯಿಕ, ರಚನಾತ್ಮಕ, ಅಪರೂಪದ ಬಂದಿಶಗಳನ್ನು ಧಾರೆ ಎರೆದ, ಎರೆಯುತ್ತಿರುವ ಶ್ರೀ ನಾರಾಯಣ ಪಂಡಿತರಿಗೂ ಶಿರಸಾಷ್ಟಾಂಗ ಪ್ರಣಾಮಗಳು. ಈ ಗ್ರಂಥದ ತಯಾರಿ ಮಾಡುವಾಗ ಹಲವು ಉಪಯುಕ್ತ ಸಲಹೆಗಳನ್ನು ನೀಡಿ ಆಶೀರ್ವದಿಸಿದ ನನ್ನ ಹಿತೈಷಿಗಳಾದ ಪ್ರೊ.ವಿ.ಅರವಿಂದ ಹೆಬ್ಬಾರ, ಉಡುಪಿ ಹಾಗೂ ಸೋದರಮಾವ ಶ್ರೀ ಜಿ.ಕೆ.ಹೆಗಡೆ, ಹರಿಕೇರಿ ಇವರಿಗೆ ಅಭಿವಂದನೆಗಳು. ನನ್ನ ಯಾವುದೇ ಕೆಲಸದಲ್ಲೂ ತನು, ಮನ, ಧನಗಳಿಂದ ಸಹಕರಿಸುವ ನನ್ನ ಮಾತೋಶ್ರೀ ಶ್ರೀಮತಿ ಸರಸ್ವತಿ ಭಟ್ಟ , ಸಹನೆಯಿಂದ ನಡೆದುಕೊಳ್ಳುವ ಪತಿ ಶ್ರೀ ಪರಮೇಶ್ವರ ಹೆಗಡೆ ಹಾಗೂ ಮಗಳು ಕು.ದುರ್ಗಾ ಹೆಗಡೆ ಇವರಿಗೆ ಪ್ರೀತಿಪೂರ್ವಕ ಧನ್ಯವಾದಗಳು. ನೃತ್ಯ, ಸಂಗೀತ, ಅಭಿನಯ ಮುಂತಾದ ವಿಷಯಗಳಲ್ಲಿ ನನಗೆ ಶಿಕ್ಷಕರಾಗಿ ದೊರೆತವರು ಹಾಗೂ ನನ್ನ ವ್ಯಕ್ತಿತ್ವ ವಿಕಾಸದಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಪಾಲ್ಗೊಂಡ ಹಿರಿ-ಕಿರಿಯ ಮಿತ್ರರಿಗೆ ಧನ್ಯವಾದಗಳು.

ಶ್ರೀ ನಾರಾಯಣ ಪಂಡಿತರ ಬಂದಿಶಗಳ ಸಂಗ್ರಹವನ್ನು ಗ್ರಂಥರೂಪದಲ್ಲಿ ಹೊರತರಲು ಉತ್ಸಾಹ ತೋರಿದ-ನಾನು ವೃತ್ತಿಯಲ್ಲಿರುವ ಸಂಸ್ಥೆಯಾದ-ಕರ್ನಾಟಕ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾಗಿರುವ ಡಾ.ಎಸ್.ಕೆ.ಸೈದಾಪುರ ಹಾಗೂ ಪದಾಧಿಕಾರಿಗಳಿಗೆ, ಪ್ರಸಾರಂಗದ ನಿರ್ದೇಶಕರಾದ ಡಾ.ಹರಿಲಾಲ ಪವಾರ ಹಾಗೂ ಸಿಬ್ಬಂದಿ ವರ್ಗದವರಿಗೆ ಅಭಿನಂದನೆಗಳು. ಅಂದವಾಗಿ ಮುದ್ರಿಸಿದ ಕರ್ನಾಟಕ ವಿಶ್ವವಿದ್ಯಾಲಯದ ಮುದ್ರಣಾಲಯದ ನಿರ್ದೇಶಕರಾದ ಡಾ.ಹೆಚ್.ಎಂ.ಮಹೇಶ್ವರಯ್ಯ ಹಾಗೂ ಸಿಬ್ಬಂದಿ ವರ್ಗದವರಿಗೆ ಕೃತಜ್ಞತೆಗಳು.

ಪ್ರಸ್ಕೃತಿ:

"ಜ್ಞಾನಾರ್ಜನೆಯು ನಿರಂತರ ಪ್ರಯಾಣದಂತೆ. ಈ ಪಯಣದಲ್ಲೇ ಸಂತೋಷವಿದೆ. ಭಾವಾಭಿವ್ಯಕ್ತಿಯಲ್ಲಿ ಭಾಷೆಯಿಂದ ಅಸಾಧ್ಯವಾದುದು ಸಂಗೀತದಿಂದ ಸಾಧ್ಯವಾಗುತ್ತದೆ. ಸಂಗೀತವೆಂಬುದು ಆನಂದ ಯಾತ್ರೆ"ಎಂಬ ಮಾತಿನ ವಾಸ್ತವಿಕ ಸತ್ಯವನ್ನು ತನ್ನ ಅನುಭವದಿಂದಲೇ ಅರಗಿಸಿಕೊಂಡ ಸಂಗೀತಸಾಧಕ, ವಾದನಾಚಾರ್ಯ ಶ್ರೀ ನಾರಾಯಣ ಪಂಡಿತರನ್ನು ನಾನು ಭೇಟಿಯಾದದ್ದು, ಧಾರವಾಡದ ಅವರ ಸಂಬಂಧಿಯೊಬ್ಬರ ಮನೆಯಲ್ಲಿ.

೨೦೦೪, ಮೇ ತಿಂಗಳ ಆಹ್ಲಾದಕರ ಮುಂಜಾವಿನ ಸಮಯ. ನನ್ನ ಗುರುಭಾಯಿಯೊಬ್ಬರ ಸಂಗೀತದ ಮೇಲಿನ ಮಹಾಪ್ರಬಂಧವನ್ನು ತರಲು ನಾನೊಬ್ಬ ವಯೋವೃದ್ಧರಲ್ಲಿಗೆ ಹೋಗಿದ್ದೆ. ಸಂಖ್ಯಾಶಾಸ್ತ್ರದಲ್ಲಿ ಡಾಕ್ಟರೇಟ ಪಡೆದಿದ್ದು, ಹಿರಿಯ ಸರಳ ಸಜ್ಜನ ಗಾಯಕರೆಂದೇ ಹೆಸರಾದ ಪಂ.ಚಂದ್ರಶೇಖರ ಪುರಾಣಿಕಮಠರ ಪ್ರಿಯಶಿಷ್ಯರಲ್ಲೊಬ್ಬಳಾಗಿದ್ದು, ಸಂಗೀತ ವಿದ್ವತ್ ಪರೀಕ್ಷೆಯನ್ನು ವಿಶೇಷ ಶ್ರೇಣಿಯಲ್ಲಿ ಪಾಸು ಮಾಡಿದ್ದರೂ ಕೂಡ, ನನ್ನ ಮನಸ್ಸಿಗೆ, ಬುದ್ಧಿಗೆ ಗ್ರಾಸ ಒದಗಿಸಬಲ್ಲ, ಮುದನೀಡಬಲ್ಲ ಒಬ್ಬ ಮಹಾನ್ ಜ್ಞಾನ ವೃದ್ಧರ ಬಾಗಿಲಿಗೇ ನಾನು ಬಂದಿದ್ದೇನೆಂಬ ಅರಿವು ಕೂಡ ಅಂದು ನನಗಿರಲಿಲ್ಲ. Accidents need not happen only for the bad (ಆಕಸ್ಮಿಕಗಳು ಕೆಟ್ಟದ್ದಕ್ಕಾಗಿಯೇ ಸಂಭವಿಸಬೇಕಾಗಿಲ್ಲ).ಎಪ್ಪತ್ತೈದು ವಸಂತಗಳನ್ನು ಕಂಡ ಒಬ್ಬ ಸರಳ, ಗುಣವಂತ ಜ್ಞಾನಿಯ ಆಕಸ್ಮಿಕ ಭೇಟಿ, ಜ್ಞಾನ ಪಿಪಾಸುವಾದ ನನ್ನ ಜೀವನದಲ್ಲಿ ಬಂದ ಒಂದು ಸುಯೋಗವೇ ಸೈ.

ಉತ್ತರಕನ್ನಡದ ಸಿರ್ಸಿಯಲ್ಲಿ, 'ಸನಾತನ ಶಾಸ್ತ್ರೀಯ ಸಂಗೀತ ವಿದ್ಯಾಲಯ'ದ ವಾರ್ಷಿಕೋತ್ಸವ ೧೩-೧-೨೦೦೧ ರಂದು ಜರುಗಿತು. ಅಂದಿನ ಸಂಗೀತ ಸಮಾರಂಭದಲ್ಲಿ ನಾನು 'ಮಧುಕೌಂಸ' ರಾಗವನ್ನು ಉತ್ತಮವಾಗಿಯೇ ಹಾಡಿದ್ದೆ. ಆದರೆ ನನ್ನ ನಂತರ ಹಾಡಿದ ಗಾಯಕಿಯೊಬ್ಬರ 'ಚಂದ್ರಕೌಂಸ' ರಾಗ ನನ್ನನ್ನು ಆವರಿಸಿಬಿಟ್ಟಿತ್ತು. ಅವರು ರಾಗವನ್ನು ವಿಕಾಸ ಮಾಡಿದ ರೀತಿ, ಅದರಲ್ಲಿ ಹಾಡಿದ 'ತರಾನಾ' ನನಗದೆಷ್ಟು ಗುಂಗು ಹಿಡಿಸಿತೆಂದರೆ, ಗಾಯಕಿ ವೇದಿಕೆಯಿಂದ ಕೆಳಗಿಳಿದಿದ್ದೇ ತಡ ಅವರಲ್ಲಿಗೆ ಹೋಗಿ ಅವರನ್ನು ಮನಃಪೂರ್ತಿ ಅಭಿನಂದಿಸಿದೆ. ಅವರು ಹಾಡಿದ 'ತರಾನಾ' ಶ್ರೀ ನಾರಾಯಣ ಪಂಡಿತರ ರಚನೆಯೆಂದು ತಿಳಿದು, ಅಂದಿನ ಸಭಿಕರಲ್ಲೊಬ್ಬರಾಗಿ ಬಂದ ಪಂಡಿತರಿಗೆ ವಂದಿಸಿದೆ. ತುಸುಬಾಗಿದ, ಕೋಲುಹಿಡಿದ ಹಿರಿಯ ಜೀವ ನನ್ನ ಮನದಲ್ಲಾಗಲೇ ಅಚ್ಚೊತ್ತಿಬಿಟ್ಟಿತು.

ಯಾವುದೇ ಸಂಗೀತಕಾರ್ಯಕ್ರಮಗಳಲ್ಲಿ ಭಾಗವಹಿಸಿದರೂ, ಧಾರವಾಡಕ್ಕೆ ಬಂದ ನಂತರ, ಅಲ್ಲಿಯ ಸಂಗತಿಗಳನ್ನು ಸವಿವರವಾಗಿ ನನ್ನ ಗುರುಗಳಲ್ಲಿ ಅರುಹುವುದು ನಾನಿಟ್ಟುಕೊಂಡು ಬಂದ ಪದ್ಧತಿ. ಮಾತೃಹೃದಯಿ ಪುರಾಣಿಕಮಠರಲ್ಲಿ ನನ್ನ ತಪ್ಪು ಒಪ್ಪುಗಳನ್ನೊಪ್ಪಿಸಿ, ಕಾರ್ಯಕ್ರಮದಲ್ಲಿ ನನಗೆ ಸಂದ ಪ್ರೀತ್ಯಾದರಗಳು, ನಾನು ಭೇಟಿಯಾದ ವಿಶಿಷ್ಟ ವ್ಯಕ್ತಿಗಳ ಬಗ್ಗೆ ಹೇಳಿದಾಗಲೇ ನನಗೊಂದು ರೀತಿಯ ಸಮಾಧಾನ. ಅಂದು ನಾನು ಸಿರ್ಸಿಯ ಕಾರ್ಯಕ್ರಮದ ವಿಷಯ, ಪಂಡಿತರ ಭೇಟಿಯ ವಿಷಯ ಹೇಳಿದ್ದೇ ತಡ, ಗುಣಗ್ರಾಹಿಗಳಾದ ನನ್ನ ಗುರುಗಳು "ಅವ್ರಿಗ್ ಕೈ ಮುಗ್ದಿ ಹೌದಿಲ್ಲೋ?. ದೊಡ್ಡ ವಿದ್ವಾನ್ ಮನ್ಶ್ಯಾರ್ ಶಾರ್ದಾ. ಹೆಂಥಾ ಛಂದ ವಯೋಲಿನ್ ನುಡಿಸ್ತಿದ್ರ್ ಗೊತ್ತದ?. ಗಾಯಕೀ ಅಂಗ ಅವ್ರ ಕೈಯಾಗ ಇತ್ ನೋಡ. ಮೊದ್ಲ ಬೊಂಬೈದಾಗಿದ್ರ. ಭಾಳ ಕಲ್ತಾರ. ವಕೀಲ್ಕಿ ಮಾಡ್ಕೋತು ಸಂಗೀತಾ ಭಾಳ ತಿಳ್ಕೊಂಡಾರ. ಅವ್ರು ಛಲೋ ಬಂದಿಶೂ ಬರೀತಾರತ್ ಕೇಳೇನಿ" ಅಂದರು. "ತರಾನಾ ಭಾಳ ಛಲೋ ಇತ್ಬಿಡ್ರಿ ಸರ್. ಅವ್ರಲ್ಲಿಗ್ ಹೋಗಿ ಒಂದ್ ನಾಲ್ಕ ಹಂತಾವ್ ಕಲೀಬೇಕನಸ್ತದ ನೋಡ್ರಿ" ಅಂದ ನಾನು ಕೆಲಕಾಲ ಸುಮ್ಮನಿದ್ದುಬಿಟ್ಟೆ. ನನ್ನ ನೌಕರಿ, ಸಂಸಾರ ಇತ್ಯಾದಿಗಳ ಮಧ್ಯೆ ಸಿರ್ಸಿಗೆ ಹೋಗಿ ಪಂಡಿತರನ್ನು ಭೇಟಿಯಾಗುವ ಪ್ರಯತ್ನವನ್ನೂ ಮಾಡಲಿಲ್ಲ. 'ಯಾರ್ಯಾರ ನಶೀಬು ಹೇಗಿದೆಯೋ ಹಾಗೆ ನಡೆಯಬೇಕಷ್ಟೆ!. ಸುಮ್ಮನೆ ನನ್ನ ಕಯ್ಯಲ್ಲಾಗಲಾರದ್ದಕ್ಕೆಲ್ಲ ತಲೆ ಕೆಡಿಸಿಕೊಳ್ಳುವುದರಲ್ಲಿ ಅರ್ಥವಿಲ್ಲಾ' ಎಂಬ ಉದಾಸೀನ ತತ್ವಕ್ಕೆ ಜೋತು ಬಿದ್ದು ನನ್ನ ನಿರಂತರ ಚಟುವಟಿಕೆಗಳಲ್ಲಿ ಮುಳುಗಿಬಿಟ್ಟೆ.

ಆದರೆ ವಿದ್ಯಾರ್ಜನೆಯಲ್ಲಿ ನನಗಿರುವ ಪ್ರಾಮಾಣಿಕತೆಯ ಪರೀಕ್ಷೆಯೇನೋ ಎಂಬಂತೆ 'ವಿಧಿ' ಪಂಡಿತರನ್ನು ಧಾರವಾಡಕ್ಕೆ ಕರೆಸಿತ್ತು. ನನ್ನನ್ನು ಅವರಲ್ಲಿಗೆ ಕಳುಹಿಸಿತ್ತು. ಗುರುಭಾಯಿಯ ಮಹಾಪ್ರಬಂಧವನ್ನು ಪಂಡಿತರಿಂದ ಪಡೆದ ನಾನು ಅವರ ಕಾಲಿಗೆರಗಿ ಅಲ್ಲಿಂದ ಹೊರಡಲನುವಾಗಿದ್ದೆ. ಆಗ ಪಂಡಿತರು ಪಕ್ಕಾ ಹವ್ಯಕ ಭಾಷೆಯಲ್ಲಿ "ನಾನು ಸಿರ್ಸೀಲಿ ನೀ ಹಾಡದ್ ಕೇಳಿದ್ದೆ. ನೀನು ಲಲಿತೇನ ಅಭಿನಂದ್ಸದ್ದೂ ಕಡೇಗೆ ಅದ್ ನಂಗ್ ಹೇಳ್ತು. ಶಾರ್ದಾ ಪ್ರಾಮಾಣಿಕವಾಗಿ ಹಾಡಿದ್ದು. ಸೂಕ್ಷ್ಮ ಭಾವನೆಗಳಿಗೆ ಸ್ಪಂದಿಸುವ ಗುಣನೂ ಅದ್ರಲ್ಲಿ ಇದ್ದಂಗೆ ಕಾಣ್ತು. ಆದ್ರೆ ಅಷ್ಟೊತ್ತ್ ಹಾಡ್ದ್ರುವಾ ಒಂದೇ ಒಂದ್ಸರಿನೂ

ಅದು ಕಣ್ಣೀ ಮುಚ್ಚಿದ್ದಿಲ್ಲಿ ಹೇಳಿ ನಾ ಲಲಿತೆಗ್ ಹೇಳ್ದೆ'' ಎಂದ ಅವರ ಸಹಜ ನಿರ್ಭಿಡೆಯ ಕಳಕಳಿಯ ಮಾತು ನನ್ನನ್ನು ಅಲ್ಲೇ ಹಿಡಿದು ನಿಲ್ಲಿಸಿಬಿಟ್ಟಿತು. ಜನವರಿ, ೨೦೦೧ರ ಸಿರ್ಸಿಯ ಕಾರ್ಯಕ್ರಮ ನನ್ನ ಸ್ಮೃತಿಪಟಲದಿಂದ ತೇಲಿ ಕಣ್ಮುಂದೆ ಬಂತು. Opportunities rarely knock your door (ಅವಕಾಶಗಳು ಅಪರೂಪಕ್ಕೊಮ್ಮೆ ಬಾಗಿಲು ತಟ್ಟುತ್ತವೆ) ಎಂಬ ಜಾಣ್ನುಡಿ ನೆನಪಾಗಿ ಈ ಅವಕಾಶವನ್ನು ಕೈಜಾರಗೊಡಬಾರದೆಂದುಕೊಂಡೆ. ಇಂತಹ ಧೀಮಂತ ಕಲಾವಿದರು ಧಾರವಾಡದಲ್ಲಿ ಇರುವಷ್ಟು ಕಾಲ, ಪಂ.ಚಂದ್ರಶೇಖರ ಪುರಾಣಿಕಮಠ ಅವರ ಮಾರ್ಗದರ್ಶನದ ಜೊತೆ ಇವರ ಮಾರ್ಗದರ್ಶನವನ್ನೂ ಪಡೆಯುವ ದೃಢ ಸಂಕಲ್ಪ ಮಾಡಿ, ಪಂಡಿತರು ಬರೆದ ಕೆಲವು ಚೀಜುಗಳನ್ನಾದರೂ ನನಗೆ ಕಲಿಸಬೇಕೆಂದು ಅವರಲ್ಲಿ ಬೇಡಿಕೊಂಡೆ. ಆದರೆ ಅವರು ನನಗೆ ಯಾವುದೇ ಭಾಷೆಯನ್ನು ನೀಡಲಿಲ್ಲ. ಪುರುಸೊತ್ತಿದ್ದಾಗ ಬಾ ನೋಡುವಾ ಎಂದುಬಿಟ್ಟರು!.

ಮನೆಗೆ ಬಂದು ಊರಿನಿಂದ ಬಂದ ನನ್ನ ಸೋದರಮಾವನಲ್ಲಿ ವಿಷಯ ಅರುಹಿದಾಗ ''ಓ ಆ ಪಂಡಿತ್ರು. ಅವರು ನಮ್ಮ ಲಯ-ಲಾಸ್ಯ ಕಾರ್ಯಕ್ರಮ ಕೇಳಿದ್ದಾರೆ. ಭಾರಿ ಜನ ಅವ್ರು. ಇದ್ದಿದ್ದನ್ನು ಇದ್ದಂತೆ ಹೇಳುವವ್ರು. ಗಿಮ್ಮಿಕ್ಸ ಎಲ್ಲಾ ಅಗ್ಲಿಕ್ಕೇ ಇಲ್ಲ ಅವ್ರಿಗೆ. ನನಗೆ ಅವ್ರನ್ನ ಕಂಡ್ರೆ ಬಹಳ ಗೌರವ, ಪ್ರೀತಿ. ಇವತ್ತು ಅವ್ರನ್ನು ಭೇಟಿ ಮಾಡಿಯೇ ಊರಿಗೆ ಹೋಗ್ತೇನೆ'' ಎಂದರು. ಸರಿ, ಅದೇ ದಿನ ಮಧ್ಯಾಹ್ನ ಮತ್ತೆ ಪಂಡಿತರ ಭೇಟಿಯಾಯಿತು. ಉತ್ತಮ ತಬಲಾ ವಾದಕರೂ, ಯಕ್ಷಗಾನ ಅರ್ಥಧಾರಿಗಳೂ, ಯಕ್ಷಗಾನದ ಶ್ರೀ ಕೆರೆಮನೆ ಮಹಾಬಲ ಹೆಗಡೆಯವರ ಮೇಲೆ ಸಂಶೋಧನೆಯನ್ನೂ ಮಾಡುವ ಪ್ರಯತ್ನದಲ್ಲಿದ್ದ ನನ್ನ ಮಾವ ಹಾಗೂ ಪಂಡಿತರ ಒಂದೆರಡು ತಾಸುಗಳ ಸಂವಾದದಲ್ಲಿ ಪಂಡಿತರ ಬಗ್ಗೆ ಇನ್ನೂ ಕೆಲವು ಅಂಶಗಳನ್ನು ಕಂಡುಕೊಂಡೆ. ಅವೆಂದರೆ ಇವರು ಮಹಾಬಲ ಹೆಗಡೆಯವರ ಆತ್ಮೀಯರಲ್ಲೊಬ್ಬರು, ನನ್ನ ಹುಟ್ಟೂರಾದ ಹೊನ್ನಾವರದಲ್ಲಿರುವ 'ಸ್ನೇಹಕುಂಜ'(ನಿಸರ್ಗೋಪಚಾರ ಆಸ್ಪತ್ರೆ)ದ ಆಡಳಿತ ಮಂಡಳಿಯ ಸದಸ್ಯರಲ್ಲಿ ಒಬ್ಬರೆಂಬುದು. ಇದೆಲ್ಲಕ್ಕಿಂತ ಮಿಗಿಲಾಗಿ ಸಂಶೋಧನಾ ಮನೋಭಾವ ಹೊಂದಿರುವ ಸ್ನೇಹಶೀಲ ವ್ಯಕ್ತಿಯೆಂಬುದು. ನಾವು ಅವರಿಂದ ಬೀಳ್ಕೊಂಡಾಗ ಅವರನ್ನು ನಾನು ಮತ್ತೆ ಭೇಟಿಯಾಗಬಹುದಾದ ದಿನ, ಸಮಯವನ್ನು ನಿಗದಿಪಡಿಸಿಕೊಳ್ಳಲು ನಾನು ಮರೆತಿರಲಿಲ್ಲ!.

ಅಂದು ಸಂಜೆ ನನ್ನ ಗುರುಗಳಾದ ಪಂ.ಚಂದ್ರಶೇಖರ ಪುರಾಣಿಕಮಠ ಅವರಲ್ಲಿಗೆ ಹೋದಾಗ ಪಂಡಿತರ ಭೇಟಿಯ ವಿಷಯ ಹೇಳಿದ್ದೇ ತಡ ''ಏ ಪಂಡಿತ್ರ ಇಲ್ಲದಾರ. ಭಾಳ ಛಲೋ ಆತ್ ನೋಡ. ಅವ್ರಿಗ್ ಭಾಳ ಛಂದ್ ಛಂದ್ ಠುಮ್ರಿಗಳ್ ಬರ್ತಾವು. ದೇಶಾ ಸುತ್ತಿ ಬಂದಿಶ ಒಟ್ ಮಾಡ್ಯಾರ. ಏ ಒಳ್ಳೇ ವಯಸ್ನಾಗ್ ನೋಡೇನಿ ಅವ್ರಿಗೆ'' ಎಂದು ಹಳೆಯ ನೆನಪನ್ನು ಮೆಲುಕು ಹಾಕಿದರು. ವಿದ್ಯಾರ್ಥಿಗಳ ಅಭ್ಯುದಯದಲ್ಲೇ ತನ್ನ ಗುರುತ್ವವನ್ನು ಮೆರೆಯುವ ಪಂ.ಪುರಾಣಿಕಮಠ ಅವರು ತುಂಬು ಹೃದಯದಿಂದ ನನ್ನನ್ನು ಆಶೀರ್ವದಿಸಿ ''ಪಂಡಿತ್ರ ನಿನ್ಗ ಕಲಿಸಿದ್ರ ಅವಕಾಶ ಬಿಡ್ಬೇಡ, ಕಲಿ'' ಎಂದು ಹಸಿರು ನಿಶಾನೆಯನ್ನು ತೋರಿಸಿಯೇ ಬಿಟ್ಟರು. ಅವರ ಆಶೀರ್ವಾದದ ಫಲವಾಗಿ ಬಹುಷಃ ಒಂದೇ ವರ್ಷದಲ್ಲಿ ಪಂಡಿತರಿಗೂ ಪ್ರಿಯ ಶಿಷ್ಯರಲ್ಲಿ ಒಬ್ಬಳಾಗಿಬಿಟ್ಟಿದ್ದೆ. 'ಗದುಗಿನ ವೀರೇಶ್ವರ ಪುಣ್ಯಾಶ್ರಮದ ಮಹಾತಪಸ್ವಿಗಳಾದ ಪಂ.ಪುಟ್ಟರಾಜ ಗವಾಯಿಗಳ ಶಿಷ್ಯರಾದ, ಗ್ವಾಲಿಯರ ಘರಾಣಾದ ಹಿರಿಯ ಗಾಯಕರೆಂದೇ ಪ್ರಸಿದ್ಧರಾದ ಪಂ. ಚಂದ್ರಶೇಖರ ಪುರಾಣಿಕಮಠ' ಹಾಗೂ 'ಸಂಗೀತದಲ್ಲಿ ಹುಟ್ಟು ಪ್ರತಿಭೆಯಾಗಿ, ನಾದಯೋಗಿಗಳಾಗಿ ಮೆರೆದ ಕುಮಾರ ಗಂಧರ್ವರ ಜೊತೆ ೩೫-೪೦ ವರ್ಷಗಳ ಕಾಲ ಸತತವಾಗಿದ್ದು ಅವರನ್ನು ಗುರುಗಳೆಂದು ಭಾವಿಸಿ ಸೇವಿಸಿದ, ಭಾರತದ ಎಲ್ಲೆಡೆ ತಮ್ಮ ಪಿಟೀಲು ವಾದನದಿಂದ ಸೃಜನಶೀಲ ಗಾನಸುಧೆ ಹರಿಸಿ, ಬಂದಿಶಗಳನ್ನು ಸಂಗ್ರಹಿಸಿ, ಸ್ವಂತ ರಚನೆಗಳನ್ನು (ನೂರೈವತ್ತಕ್ಕೂ ಮೇಲ್ಪಟ್ಟು) ಬರೆದ, ಶ್ರೀ ನಾರಾಯಣ ಪಂಡಿತ' ಈ ಗುರುದ್ವಯರ ಶಿಷ್ಯಳಾಗಿ ಸಂಗೀತದಲ್ಲಿಯ ನನ್ನ ಪ್ರಯಾಣ ನನಗೆ ತುಂಬಾ ಆಹ್ಲಾದಕರವೂ, ಆನಂದಮಯವೂ ಆಗಿದೆ.

ಇಬ್ಬರೂ ತುಳಿದು ಬಂದ ದಾರಿ ಸಂಪೂರ್ಣ ಬೇರೆಯೇ ಆದರೂ, ವಾಸಿಸುವ ರೀತಿ ಭಿನ್ನವೇ ಇದ್ದರೂ, ಇವರಿಬ್ಬರಲ್ಲೂ ಒಂದೇ ತೆರನಾದ ಹಲವು ಗುಣಗಳಿರುವುದನ್ನು ನೋಡಿದ್ದೇನೆ. ಅವೆಂದರೆ ವಿದ್ಯೆಯ ಬಗ್ಗಿರುವ ಪ್ರಾಮಾಣಿಕತೆ, ಪ್ರೀತಿ, ಗೌರವ; ಶಿಷ್ಯರ ಬಗ್ಗಿರುವ ಕಾಳಜಿ, ಆತ್ಮೀಯತೆ, ಸ್ನೇಹಪರತೆ; ಬೇರೆ ಕಲಾವಿದರಲ್ಲಿ ತೋರುವ ಆದರ, ಸಹೃದಯಶೀಲತೆ; ಶಿಷ್ಯರಿಗೆ ವಿದ್ಯೆ ನೀಡುವಲ್ಲಿರುವ ತನ್ಮಯತೆ.

ಪಂಡಿತರಲ್ಲಿಗೆ ಬರುವಾಗ ನಾನೇನೋ ಒಂದ್ನಾಲ್ಕು ಠುಮ್ರಿಗಳನ್ನೋ, ಬಂದಿಶಗಳನ್ನೋ ಕಲಿಯಬೇಕೆಂದು ಬಂದಿದ್ದೆ. ಒಂದೆರಡೇ ರತ್ನಗಳನ್ನು ಬೇಡಿ ಬಂದವಳಿಗೆ, ಪಂಡಿತರು, ರತ್ನಗಳೇ ತುಂಬಿದ ದೊಡ್ಡ ತಿಜೂರಿಯ ಬಾಗಿಲನ್ನೇ ತೆರೆದು 'ಇವಿಷ್ಟೂ ನಿನಗೇ, ಒಯ್ಯಿ' ಎಂದರೆ ಹೇಗಾಗಲಿಕ್ಕಿಲ್ಲ?. ಅದು ಅವರ ದೊಡ್ಡ ಗುಣ. ವಿದ್ಯೆಯಲ್ಲಿ, ಅದೂ ಸಂಗೀತ ವಿದ್ಯೆಯಲ್ಲಿ 'ಕೊಟ್ಟವನೆಂದೂ ಬರಿದಾಗಲಾರ, ಕೊಳ್ಳುವವನೆಂದೂ ತುಂಬಿಕೊಳ್ಳಲಾರ'. ಪಂಡಿತರೇ ಹೇಳುವಂತೆ, "ನಾನು ಕೊಡಲು ಮನಸ್ಸು ಮಾಡಿದರೂ, ತೆಗೆದುಕೊಳ್ಳಬೇಕಾದ ನೀನು ಸತತ ಹಾಗೂ ದೀರ್ಘ ಪರಿಶ್ರಮಗಳಿಂದಾ ನಿನ್ನದಾಗಿಸಿಕೊಳ್ಳಬೇಕು" ಎಂಬ ಮಾತು ನಿಷ್ಠುರ ಸತ್ಯವೇ. ಸೃಜನಶೀಲತೆ, ಕ್ರಿಯಾತ್ಮಕತೆ, ಅಭಿಜಾತತೆಗಳನ್ನೊಳಗೊಂಡ ಹಿಂದುಸ್ತಾನೀ ಸಂಗೀತದ ವಿರಾಟ ಸ್ವರೂಪದ ದರ್ಶನ, ಪಕ್ಷಿ ನೋಟದ ರೀತಿಯಲ್ಲಾಗಲೇ ತೋರಿಸಿದ್ದಾರೆ. ಬರಿಯ 'ಸ್ವರ-ಲಯ', 'ಸ್ವರ-ಸಂವಾದ', 'ಸ್ವರ-ಭಾವ'ಗಳ ಜಗತ್ತೇ ಎಷ್ಟೊಂsದು ವಿಶಾಲವಾಗಿದೆ, ಆಳವಾಗಿದೆ, ಸುಂದರವಾಗಿದೆ ಎಂಬುದನ್ನು ಹಂತ ಹಂತವಾಗಿ ತಮ್ಮ ರಚನೆಗಳ ಮೂಲಕ ನನ್ನ ಮುಂದೆ ತೆರೆದಿಟ್ಟಿದ್ದಾರೆ ಪಂಡಿತರು.

ಶ್ರೀ ನಾರಾಯಣ ಪಂಡಿತರು ಮೂಲತಃ ಗೋಕರ್ಣದವರು. ಮನೆತನಕ್ಕೆ ಸಂಬಂಧಿಸಿದ 'ಪಂಡಿತ' ಎಂಬ ಅಂಕಿತವು ಅನ್ವರ್ಥಕವಾಗಿ ಸಂದುದು ಅವರ ಸಂಗೀತ ಸಾಧನೆಗೆ ಸಂದ ಗೌರವ. ಇವರ ಬಾಲ್ಯ, ವಿದ್ಯಾಭ್ಯಾಸಗಳೆಲ್ಲವೂ ಬೊಂಬಾಯಿಯಲ್ಲಿ.

ಶ್ರೀ ನಾರಾಯಣ ಪಂಡಿತರ ತಂದೆ ಶ್ರೀ ವಿಘ್ನೇಶ್ವರ ಪಂಡಿತರು ಬೊಂಬಾಯಿಯಲ್ಲಿ ಪಂ. ಬಿ.ಆರ್. ದೇವಧರ ಅವರ ಸಂಗೀತ ಶಾಲೆ (School of Indian Music)ಯಲ್ಲಿ ಪಿಟೀಲುವಾದನದ ಶಿಕ್ಷಕರಾಗಿದ್ದರು. ಅಲ್ಲಿಯ ಜನ ಇವರನ್ನು ವಿಘ್ನೇಶ್ವರ ಶಾಸ್ತ್ರಿಗಳೆಂದು ಕರೆಯುತ್ತಿದ್ದರು. ಪಿಟೀಲು ಕೃಷ್ಣಪ್ಪ (ಫಿಡ್ಲು ಕೃಷ್ಣರಾವ್) ನವರಲ್ಲಿ ಕರ್ನಾಟಕೀ ಶೈಲಿಯ ಪಿಟೀಲು ಅಭ್ಯಾಸ ಮಾಡಲೆಂದು ಗೋಕರ್ಣದಿಂದ ಮಂಗಳೂರಿಗೆ ಕಾಲ್ನಡಿಗೆಯಲ್ಲೇ ಹೋದ ಸಾಹಸಿ. ಜೀವನದಲ್ಲಿ ಏನಾದರೂ ಮಹತ್ತರವಾದುದನ್ನು ಸಾಧಿಸಬೇಕೆಂಬ ಹಂಬಲದಿಂದ ಬೊಂಬಾಯಿಗೆ ಹೋಗಿ, ಅಲ್ಲಿ ಉತ್ತಮ ಪಿಟೀಲು ವಾದನದ ಶಿಕ್ಷಕರಾಗಿ, ನೂರಾರು ವಿದ್ಯಾರ್ಥಿಗಳಿಗೆ ಪಿಟೀಲಿನಲ್ಲಿ ಹಿಂದುಸ್ತಾನೀ ಶಾಸ್ತ್ರೀಯ ಸಂಗೀತ ನುಡಿಸಲು ಕಲಿಸಿದ ಘನತೆ ಇವರದು. ಹಿಂದುಸ್ತಾನೀ ಶೈಲಿಯಲ್ಲಿ, ಪಿಟೀಲುವಾದನದಲ್ಲಿ ಗಾಯಕೀ ಅಂಗದ ವಾದನ ರೀತಿಯನ್ನು ಕಂಡುಹಿಡಿದರು. ಇವರ ನಾಲ್ಕು ಜನ ಮಕ್ಕಳಲ್ಲಿ ಶ್ರೀ ನಾರಾಯಣ ಪಂಡಿತರು ಎರಡನೆಯವರು. ಜೂನ್೨೩, ೧೯೩೦ ರಂದು ಜನಿಸಿದರು. ಚುರುಕುಬುದ್ಧಿ, ತೀಕ್ಷ್ಣ ಹಾಗೂ ಸೂಕ್ಷ್ಮ ಮತಿ ಹೊಂದಿದ ಈ ಮಗನ ಮೇಲೆ ತಂದೆಗೆ 'ಗುರುವಿಗೆ ಉತ್ತಮ ಶಿಷ್ಯನೊಬ್ಬನ ಮೇಲೆ ಇರುವಂತಹ' ಅಕ್ಕರೆ. 'ತಂದೆಯ ಮಮತೆ' ಎಂದೆಂದಿಗೂ ಮಗನ ವಿದ್ಯಾಭ್ಯಾಸಕ್ಕೆ ತೊಂದರೆ ಕೊಡದಂತೆ ನೋಡಿಕೊಂಡರು. ಸಂಗೀತದ ಮೂಲ (basic) ಪಾಠಗಳನ್ನು ತಾವೇ ಹೇಳಿಕೊಟ್ಟು , ಮಗನಿಗೆ ಪಿಟೀಲುವಾದನ ಕಲಿಸಿದರು. ಮಗ ಒಂದು ದಿನವೂ ಪಾಠತಪ್ಪಿಸುವಂತಿಲ್ಲ, ರಿಯಾಜ (ಅಭ್ಯಾಸ) ಬಿಡುವಂತಿಲ್ಲ. ಜ್ವರ ಬಂದರೂ ಸೈ, ಪಿಟೀಲಿನ ಮೇಲೆ ಕಮಾನು ಆಡಿಸಿಯೇ ಮಲಗಬೇಕು. ಹೀಗೇ ಮಗನು ತನ್ನಲ್ಲಿ ಸ್ವಯಂ ಶಿಸ್ತು ಅಳವಡಿಸಿಕೊಳ್ಳುವಂತೆ ಮಾಡುವ ಸತತ ಪ್ರಯತ್ನ ಅವರದಾಗಿರುತ್ತಿತ್ತು.

ಪಂ.ಬಿ.ಆರ್.ದೇವಧರ ಅವರ ಸಂಗೀತ ಶಾಲೆಗೆ ಭಾರತದ ಅನೇಕ ಹಿರಿಯ, ಪ್ರತಿಭಾನ್ವಿತ ಗಾಯಕರು-ವಾದಕರು-ಸಂಗೀತಜ್ಞರು ಬರುತ್ತಿದ್ದರು. ಅಂತಹವರೆಲ್ಲರ ಕಚೇರಿಗಳನ್ನು ಚಿಕ್ಕ ವಯಸ್ಸಿನಿಂದಲೂ ಆಲಿಸುವ ಸದಾವಕಾಶ ನಾರಾಯಣ ಪಂಡಿತರಿಗಿತ್ತು. ಸಂಗೀತಶಾಲೆಯಲ್ಲಿ ನಡೆಯುವ ಕಾರ್ಯಕ್ರಮಳಿಗೆ ತಂಬೂರಿ ಶೃತಿಗೂಡಿಸುವ ಕೆಲಸ ಇವರ ಪಾಲಿಗೇ ಬರುತ್ತಿತ್ತು. ಸಂಗೀತ ದಿಗ್ಗಜರಾದ ಫೈಯಾಜಖಾನ್, ಬಡೇ ಗುಲಾಮ ಅಲಿ ಖಾನ್, ಅಲ್ಲಾದಿಯಾ ಖಾನ್ (ಜೈಪುರ ಘರಾಣಾ ಸಂಸ್ಥಾಪಕರು), ಅಲ್ಲಾಉದ್ದೀನ್ ಖಾನ್(ಸರೋದ ವಾದಕರು, ಮೈಹರ್ ಘರಾಣಾ, ಪಂ.ರವಿಶಂಕರ ಅವರ ಗುರುಗಳು), ಕೇಸರಬಾ ಈ ಕೇಳ್ಕರ್, ಮೋಗೂಬಾ ಈ ಕುರ್ಡೀಕರ್, ಸಿದ್ಧೇಶ್ವರಿ ದೇವಿ, ಬಿಂಬೇಖಾನ್ (ಪಂಜಾಬ ಘರಾಣಾ), ರಸೂಲನ್ ಬಾಈ (ಬನಾರಸನವರು, ಸುಪ್ರಸಿದ್ಧ ಠುಮರೀ ಗಾಯಕಿ), ಬೇಗಮ್ ಅಖ್ತರ್, ಓಂಕಾರನಾಥ ಠಾಕುರ, ಕೃಷ್ಣರಾವ್ ಪಂಡಿತ, ಕಾದರ್ ಭಕ್ಷ (ಪಂಜಾಬ ಘರಾಣಾ ತಬಲಾ ವಾದಕರು, ಉಸ್ತಾದ ಅಲ್ಲಾರಖಾ ಅವರ ಗುರುಗಳು), ಪಂಡಿತ ರವಿಶಂಕರ ಮುಂತಾದವರ ಕಚೇರಿಗಳನ್ನು ತುಂಬಾ ಹತ್ತಿರದಿಂದ ಆಲಿಸಿದರು. ಪಂ.ದೇವಧರರ ಸಾಕುಮಗನೆನಿಸಿದ ಪಂ.ಕುಮಾರಗಂಧರ್ವರ ಹತ್ತಿರದ ಅನುಯಾಯಿಗಳಲ್ಲಿ ಒಬ್ಬರಾದರು. ಅವರ ಸಂಶೋಧನಾತ್ಮಕ ದೃಷ್ಟಿಕೋನದಿಂದ ಪ್ರಭಾವಿತರಾದರು. ಅವರಿಗೆ ಅದೆಷ್ಟೋ ಬಾರಿ ತಂಬೂರಿ ಸಾಥ ನೀಡಿದ್ದಾರೆ. ಅವರಿಂದ ಪ್ರತ್ಯಕ್ಷವಾಗಿ ಕಲಿತದ್ದಿಲ್ಲ. ಆದರೆ ಅವರ ಮೌಲ್ಯಗಳನ್ನು ಅರಿತು, ಅದರ ಮೇಲೆ ಚಿಂತನೆ ನಡೆಸುತ್ತಿದ್ದ ಶ್ರೀ ನಾರಾಯಣ ಪಂಡಿತರು, ಪಂ.ಕುಮಾರ ಗಂಧರ್ವರ ಆತ್ಮೀಯರಲ್ಲೊಬ್ಬರಾದರು. ಕುಮಾರ ಗಂಧರ್ವರ ಗರಡಿಯಲ್ಲಿ ವಾದಕರೂ ತಯಾರಾಗಿದ್ದಾರೆ ಎಂಬ ಜನಮನ್ನಣೆಗೆ ಪಾತ್ರರಾದರು. ಹಾಗೂ ಅವರ ಕಿರಿಯ ಸ್ನೇಹಿತರಲ್ಲೊಬ್ಬರಾದರು.

ಒಮ್ಮೆ ಬೊಂಬಾಯಿಯ 'ರಂಗಭವನ'ದಲ್ಲಿ ಪಂ.ಕುಮಾರ ಗಂಧರ್ವರ ಸಂಗೀತ ಕಚೇರಿಯಿತ್ತು. ಅವರಿಗೆ ಶ್ರೀ ನಾರಾಯಣ ಪಂಡಿತರು ತಂಬೂರಿಯಲ್ಲಿ ಸಹಕರಿಸಿದ್ದರು. ಕಚೇರಿ ಮುಗಿಸಿ ಬರುತ್ತಿರುವಾಗ ಕುಮಾರಜೀಗೆ ಸಭಿಕರಲ್ಲೊಬ್ಬರು ಬಂದು 'ಪಾನ್' ನೀಡಿದರು. ಪಾನ್ ಎಂದರೆ ತಾಂಬೂಲ, ಅದು ಸ್ನೇಹ(ಪ್ರೀತಿ)ದ್ಯೋತಕವಾಗಿ ನೀಡಲ್ಪಡುತ್ತಿತ್ತು. ಅಷ್ಟೇ ಅಲ್ಲ, ಕುಮಾರಜೀಗೆ ಪಾನ್ ಬಹು ಇಷ್ಟವಾಗಿತ್ತು. ಕೈಗೆ ಬಂದ ಪಾನ್ ಅನ್ನು ಕುಮಾರಜೀ ಇನ್ನೇನು ಬಾಯಿಯೊಳಗಿಡಬೇಕು, ಆಗ ಪಂಡಿತರು 'ತಮ್ಮ ಸುಪ್ತಪ್ರಜ್ಞೆಗೆ ಏನೋ ಹೊಳೆದಂತಾಗಿ' ಕುಮಾರಜೀಗೆ ಪಾನ್ ತಿನ್ನಬಾರದೆಂದು ಸೂಚಿಸಿದರು. ಸ್ವಲ್ಪ ವಿಚಲಿತರಾದ ಕುಮಾರಜೀ ಪಾನ್ ಬಿಚ್ಚಿ ನೋಡಿದರೆ ಅದರಲ್ಲೊಂದು 'ವಾಯರ್' ತುಣುಕಿತ್ತು. ಲೋಕಪ್ರಿಯರಾದ ಪ್ರತಿಯೊಬ್ಬರೂ ಪ್ರತಿಕ್ಷಣದಲ್ಲೂ ಎಚ್ಚರವಹಿಸಬೇಕಾಗುತ್ತದೆ ಎಂಬ ಸತ್ಯವನ್ನು ಇಬ್ಬರೂ ಮನಗಂಡರು. ಕುಮಾರ ಗಂಧರ್ವರ ಕಚೇರಿಗಳು ಆಗಾಗ ಬೊಂಬಾಯಿಯಲ್ಲಿ ನಡೆಯುತ್ತಿದ್ದು ಅವರ ಒಂದು ಜೊತೆ ತಾನಪುರಾ ಪಂಡಿತರ ಮನೆಯಲ್ಲೇ ಇದ್ದವು. ಇಬ್ಬರಿಗೂ ಕೌಟುಂಬಿಕ ಸ್ನೇಹವೂ ಇತ್ತು.

ಪಂಡಿತರಿಗೆ ಚಿಕ್ಕ ವಯಸ್ಸಿನಿಂದಲೂ ಶ್ರೇಷ್ಠ ಗಾಯಕರಾದ ಉಸ್ತಾದ ಬಡೇ ಗುಲಾಮ ಅಲಿ ಖಾನರ ಜೊತೆ ಸಲಿಗೆಯಿತ್ತು. ಅವರಗಾಯನದ ಪ್ರಭಾವಕ್ಕೊಳಗಾಗಿ ಠುಮ್ರಿ ಗಾಯನ ಶೈಲಿಯ ಬಗ್ಗೆ ಒಲವು ಬೆಳೆಸಿಕೊಂಡಿದ್ದರು. ಒಮ್ಮೆ 'ರಂಗಭವನ'ದಲ್ಲಿ ಮಹಾರಾಷ್ಟ್ರ ಸರ್ಕಾರ ಏರ್ಪಡಿಸಿದ್ದ ಸಂಗೀತ ಸಮ್ಮೇಳನದಲ್ಲಿ ಪಂಡಿತರ ಕಚೇರಿಯನ್ನು ಏರ್ಪಡಿಸಲಾಗಿತ್ತು. ಆಗ ಇವರಿಗೆ ವಯಸ್ಸು ಹೆಚ್ಚು-ಕಮ್ಮಿ ಇಪ್ಪತ್ತೈದಿರಬೇಕು. ಇವರ ಮೇಲಿನ ಪ್ರೀತಿಯಿಂದ ಇವರ ಕಚೇರಿ ಆಲಿಸಲು ಬಡೇಗುಲಾಮರು ಅಲ್ಲಿಗೆ ಬಂದಿದ್ದರು. ಸ್ವತಃ ಉತ್ತಮ ಸಾರಂಗೀವಾದಕರೂ ಆದ ಅವರು ವೇದಿಕೆಗೆ ಬಂದು ಪಂಡಿತರಿಗೆ ಅಭಿನಂದಿಸಿದರು. ಅಷ್ಟೇ ಅಲ್ಲ ಇವರ ಸಾಧನೆಯನ್ನು ಇವರ ತಂದೆಯವರಲ್ಲಿ ಹೊಗಳಿಹೇಳಿ ಖುಶಿಪಟ್ಟರು.

ಪಂ.ಕುಮಾರ ಗಂಧರ್ವರು ಮಧ್ಯಪ್ರದೇಶದ ದೇವಾಸದಲ್ಲಿ ವಾಸಿಸುತ್ತಿದ್ದ ಸಮಯದಲ್ಲಿ, ಹೋಳಿ ಪ್ರಯುಕ್ತ ಇಂದೋರನಲ್ಲಿ ಪಂಡಿತರ ಪಿಟೀಲುವಾದನದ ಕಚೇರಿ ಏರ್ಪಡಿಸಲಾಗಿತ್ತು. ಇವರ ವಾದನ ಕೇಳಲೆಂದು ಕುಮಾರಜೀ ಮುಂದಿನ

ಆಸನದಲ್ಲೇ ಕುಳಿತಿದ್ದರು. 'ಸುರ ಕೀ ರಾಜಾ'ನಂತೆ ಸುರೇಲ ಇರುವ ಕುಮಾರಜೀಯವರ ಉಪಸ್ಥಿತಿಯೇ ಪಂಡಿತರಲ್ಲಿ ಒಂದು ತರಹದ ಕಂಪನವನ್ನುಂಟುಮಾಡಿತ್ತು. ಪಂಡಿತರು ಒಮ್ಮೆ ಅವರನ್ನು ನೋಡಿ ವೇದಿಕೆಯಿಂದಲೇ ತಲೆಬಾಗಿ, ಪಿಟೀಲಿನ ಮೇಲೆ ಕಮಾನು ಎಳೆದರು. ಅದು ಅದೆಷ್ಟು ಸರಿಯಾಗಿದ್ದಿತೆಂದರೆ ಕುಮಾರಜೀ 'ಹಾಂ' ಎಂದು ಉದ್ಗರಿಸಿ ತಮ್ಮ ಮೆಚ್ಚುಗೆಯನ್ನು ಅಭಿವ್ಯಕ್ತಿಗೊಳಿಸಿದರು. ಆಗಿನ ಸಂಗೀತಲೋಕಕ್ಕೆ ಮುಕುಟಪ್ರಾಯರಾಗಿದ್ದ, ತನ್ನ ಗುರುವಿನ ಸ್ಥಾನವನ್ನೂ ತುಂಬಿದ್ದ, ತನ್ನ ಬಗ್ಗೆ ಬಹು ಆತ್ಮೀಯತೆಯನ್ನು ತೋರಿದರೂ, ಸಂಗೀತಿಕ ಅಂಶಗಳ ಬಗ್ಗೆ 'no compromise' (ರಾಜಿ ಸಲ್ಲದು) ಎನ್ನುವ ಕುಮಾರ ಗಂಧರ್ವರ ಪ್ರಶಸ್ತಿ ಪತ್ರವೇ ದೊರಕಿತೆಂಬ ಆನಂದದಲ್ಲಿ ಪಂಡಿತರು ತನ್ನನ್ನೇ ತಾನು ಮರೆತು, ಬಹು ತನ್ಮಯತೆಯಿಂದ ಕಚೇರಿ ನಡೆಸಿದರು. ಅಷ್ಟೇ ಅಲ್ಲ, ಕುಮಾರ ಗಂಧರ್ವರು ಬಹುಪ್ರೀತಿಯಿಂದ ಹಾಡುತ್ತಿದ್ದ 'ನಿರ್ಗುಣೀ ಭಜನ್' ಗಳನ್ನು ಪಿಟೀಲಿನಲ್ಲಿ ನುಡಿಸಿ ಅವರ ಪ್ರೀತಿಗೆ ಪಾತ್ರರಾಗಿದ್ದರು.

ತಂದೆಗೆ ವಿಧೇಯ ವಿದ್ಯಾರ್ಥಿಯಾಗಿ ಅಪ್ಪಟ ಸಂಪ್ರದಾಯದಲ್ಲೇ ಬೆಳೆಯುತ್ತಿದ್ದರೂ, ಕೆಲವು ಮನೆ ಪಾಠಗಳನ್ನು ಮಾಡಿ ಅಷ್ಟಿಷ್ಟು ಗಳಿಸುತ್ತಿದ್ದರೂ, ಸಂಗೀತದಲ್ಲಿ ಏನಾದರೂ ಕ್ರಿಯಾಶೀಲ ಕೆಲಸವನ್ನು ಮಾಡಬೇಕೆಂದು ಪಂಡಿತರ ಮನಸ್ಸು ಚಡಪಡಿಸುತ್ತಿತ್ತು. ಸಂಗೀತಪಾಠಗಳನ್ನೇ ಜೀವನಾಧಾರಕ್ಕಾಗಿ ಇಟ್ಟುಕೊಂಡರೆ ಉತ್ತಮ ವಾದಕನಾಗುವ ಸಾಧ್ಯತೆ ಕಡಿಮೆ ಎಂದು ಬಗೆದು, ವೃತ್ತಿಯಲ್ಲಿ ವಕೀಲರಾದರು. ಕೋರ್ಟಿಗೆ ರಜೆ ಬಂತೆಂದರೆ ಸಂಗೀತಕಚೇರಿಗಳಿಗೆ ಹೋಗಲು ಸದಾಸಿದ್ಧರಾಗಿರುತ್ತಿದ್ದರು. ಉತ್ತರಭಾರತದ ಅನೇಕ ಪ್ರತಿಷ್ಠಿತ ವೇದಿಕೆಗಳಲ್ಲಿ (ಉದಾಹರಣೆಗೆ ಗ್ವಾಲಿಯರದ ತಾನಸೇನ ಉತ್ಸವ, ಕಲಕತ್ತಾದ ಲಾಲಾಬಾಬು ಕಾನ್ಫರೆನ್ಸ, ಅಮೃತಸರದ ಹಂಡಾ ಉತ್ಸವ, ಮುಂತಾದವುಗಳು) ಕಚೇರಿಗಳನ್ನು ನೀಡಿದ್ದಾರೆ. ಭಾರತದ ಮೊದಲ ರಾಷ್ಟ್ರಪತಿ ಡಾ. ರಾಜೇಂದ್ರ ಪ್ರಸಾದ ಹಾಗೂ ಎರಡನೇ ರಾಷ್ಟ್ರಪತಿ ಡಾ. ರಾಧಾಕೃಷ್ಣನ್ ಅವರೆದುರು ಪಿಟೀಲು ನುಡಿಸಿದ್ದಾರೆ. ಕೆಲವು ವಿಶ್ವವಿದ್ಯಾಲಯಗಳಲ್ಲಿ, ಸಂಗೀತ ಸಂಸ್ಥೆಗಳಲ್ಲಿ ಸಂಗೀತ ಪ್ರಾತ್ಯಕ್ಷಿಕೆಗಳನ್ನು ನಡೆಸಿಕೊಟ್ಟಿದ್ದಾರೆ. ಖೈರಾಗಡ, ಬರೋಡಾ, ನಾಗಪುರ, ಬನಾರಸ ಮುಂತಾದ ವಿಶ್ವವಿದ್ಯಾಲಯಗಳಿಗೆ ಸಂಗೀತಪರೀಕ್ಷಕರಾಗಿ ಕಾರ್ಯನಿರ್ವಹಿಸಿದ್ದಾರೆ. ಆಕಾಶವಾಣಿ ಬೊಂಬಾಯಿಯಲ್ಲಿ 'ಎ' ಗ್ರೇಡ ಕಲಾವಿದರಾಗಿದ್ದರು. ಆಕಾಶವಾಣಿ ರಾಷ್ಟ್ರೀಯ ಪ್ರಸಾರಣ(National program)ದಲ್ಲಿ ಮೂರು ಸಾರಿ ಪಾಲ್ಗೊಂಡಿದ್ದಾರೆ. ಡೆಲ್ಲಿ ಹಾಗೂ ಬೊಂಬಾಯಿ ದೂರದರ್ಶನಗಳಲ್ಲಿ ಇವರ ಕಾರ್ಯಕ್ರಮಗಳು ಪ್ರಸಾರವಾಗಿವೆ. ಮಹಾರಾಷ್ಟ್ರ ಸರ್ಕಾರ ಇವರ ಪ್ರತಿಭೆಯನ್ನು ಗುರುತಿಸಿ, ಗೌರವಿಸಿದೆ.

ಒಮ್ಮೆ ಕಲಕತ್ತಾದಲ್ಲಿ ನಡೆಯುವ ಲಾಲಾಬಾಬು ಸಮ್ಮೇಳನದಲ್ಲಿ ಪಂಡಿತರು ಪಾಲ್ಗೊಂಡಾಗ, ಅವರಿಗೆಂದು ಪೂರ್ವ ನಿಯೋಜಿತರಾದ ತಬಲಾವಾದಕರಿಗೆ ಬರಲಾಗಲಿಲ್ಲ. ಆಗ ಸಮ್ಮೇಳನದ ಮುಖ್ಯಸ್ಥರಾದ ಲಾಲಾಬಾಬು ಅವರೇ ಅಲ್ಲಿಯ ಹಿರಿಯ, ಶ್ರೇಷ್ಠ ತಬಲಾವಾದಕರಾದ ಉಸ್ತಾದ ಕರಾಮತ ಅಲಿ ಅವರನ್ನು ಪಂಡಿತರಿಗೆ ತಬಲಾಸಾಥ ನೀಡುವಂತೆ ವಿನಂತಿಸಿದರು. 'ಪಿಟೀಲಿನವರೆಲ್ಲಾ ಏನು ನುಡಿಸುತ್ತಾರೆ?. ಅವರಿಗೆಲ್ಲಾ ತಬಲಾ ನುಡಿಸಲಾಗುವುದೇ? ಅದನ್ನು ಬಾರಿಸಬೇಕಷ್ಟೆ' ಎಂದು ಬೇಜಾರಿನಿಂದಲೇ ಸಾಥನೀಡಲು ಒಪ್ಪಿಕೊಂಡ ಕರಾಮತಅಲಿ ಅವರು, ಕಚೇರಿ ಮುಗಿದಾಗ ಬಹು ಆನಂದದಲ್ಲಿದ್ದರು. ಪಂಡಿತರ ಪಿಟೀಲು ವಾದನದಲ್ಲಿದ್ದ ಮಾಧುರ್ಯ, ಗಾಂಭೀರ್ಯ, ಗಾಯಕೀಶೈಲಿ, ಲಯದ ಮೇಲಿನ ಪ್ರಭುತ್ವ ಮುಂತಾದ ಒಳ್ಳೆಯ ಗುಣಗಳನ್ನು ನೋಡಿ ತಮ್ಮ ಅಭಿಪ್ರಾಯವನ್ನು ಬದಲಾಯಿಸಿದ್ದರು. ಹಾಗೂ ಅವರು ಪಂಡಿತರಿಗೆ 'ಬೇಟಾ, ಮತ್ತೊಮ್ಮೆ ನಿನಗೆ ತಬಲಾಸಾಥ ನೀಡುವ ಯೋಗ ನನ್ನದಾಗಲಿ' ಎಂದು ಹೇಳಿ ಆಶೀರ್ವದಿಸಿದ್ದರು ಕೂಡ.

ಅತಿಯಾದ ಶಿಸ್ತಿನಲ್ಲಿ ಕ್ರಿಯಾಶೀಲತೆಯಿರುವುದು ವಿರಳ. ದಿನಾಲೂ 'ಉಜ್ಜುಗೋಟು' ಹೊಡೆದರೆ (ಮಾಡಿದ್ದೇ ಮಾಡಿದರೆ ಅಥವಾ ನುಡಿಸಿದ್ದೆ ನುಡಿಸಿದರೆ) ಹೊಸವಿಚಾರಗಳು ಉದ್ಭವಿಸಬೇಕಾಗಿಲ್ಲ ಎಂಬುದನ್ನು ನಂಬಿದ ಪಂಡಿತರು, ಪಿಟೀಲನ್ನು ಗಾಯಕೀ ಅಂಗದಲ್ಲಿ ನುಡಿಸುತ್ತಿದ್ದರು. ಒಂದು ಸಾರಿ ಇವರ ಕಚೇರಿಯೊಂದಕ್ಕೆ ಇವರ ತಂದೆ ಸಭಿಕರೊಂದಿಗೆ

ಮುಂದೇ ಕುಳಿತಿದ್ದರು. ಆಗ ಇವರು ರಾಗ ಜೋಗ ನುಡಿಸಹೋಗಿ ಮೊದಲಬಾರಿಗೇ 'ಗ s ಸಾ' ಎಂದು ನುಡಿಸಿದರು. ಆಗ ಸಂಪ್ರದಾಯದಂತೆ 'ಸಾ, ಸಾಗ s ಸಾ' ಎಂದು ನುಡಿಸುವುದು ರೂಢಿಯಲ್ಲಿತ್ತು. ಇವರು ಈ ರೀತಿಯಾಗಿ ನುಡಿಸಿ, ಸಂಗೀತದಲ್ಲಿಯ 'ಭಾವಸೌಂದರ್ಯವಾದ' ದಲ್ಲಿ ಮೊದಲ ಹೆಜ್ಜೆ ಇಟ್ಟಿದುದನ್ನು ಇವರ ತಂದೆ ಮನದಲ್ಲೇ ಶ್ಲಾಘಿಸಿದರು. ಪಿಟೀಲು ವಾದನದಲ್ಲಿ ಅನೇಕ ಬಂದಿಶಗಳನ್ನು , ಬನಾರಸಿ-ಪಂಜಾಬಿ ಠುಮ್ರಿಗಳನ್ನು, ನಿರ್ಗುಣೀ ಭಜನ, ಲೋಕಧುನ ಮುಂತಾದವುಗಳನ್ನು ಅತ್ಯಂತ ಮಧುರವಾಗಿ ನುಡಿಸುತ್ತಿದ್ದರು. ಮರಾಠಿಯಲ್ಲಿ, ಪಿಟೀಲಿನ ಮೇಲೆ "ವಾಯೋಲಿನ" ಎಂಬ ಪುಸ್ತಕವನ್ನು ಬರೆದಿದ್ದಾರೆ. ಇದು ನಾಗಪುರ ವಿದ್ಯಾಪೀಠದಿಂದ ೧೯೭೪ ರಲ್ಲಿ ಪ್ರಕಾಶನ ಕಂಡಿದೆ. ಪಿಟೀಲಿನಲ್ಲಿ ಹೊಸ ಹೊಸ ಬಂದಿಶಗಳನ್ನು ನುಡಿಸುವಾಗ, ಸಾಹಿತ್ಯದ ಶಬ್ದಗಳನ್ನು ಹೊರಡಿಸುವ ದಿಶೆಯಲ್ಲಿ , ಕಮಾನಿನ ಬಳಕೆಗೆ ಹಲವು ಹೊಸ ತಾಂತ್ರಿಕತೆಗಳನ್ನು ಅಳವಡಿಸಿದ್ದಾರೆ.

ಒಳ್ಳೆಯ ಪುಸ್ತಕಗಳನ್ನು ಓದುವುದು, ವಿಮರ್ಶಿಸುವುದು ಪಂಡಿತರಿಗೆ ಬಾಲ್ಯದಿಂದಲೂ ಇದ್ದ ಗೀಳು. ಹಿಂದಿ, ಮರಾಠಿ, ಇಂಗ್ಲಿಷಿನಲ್ಲಿ ಅನೇಕ ಕಥೆ, ಕಾದಂಬರಿ, ಜೀವನಚರಿತ್ರೆಗಳನ್ನು ಓದಿ ಅವುಗಳ ಬಗ್ಗೆ ಚಿಂತನೆ ನಡೆಸಿದ್ದಾರೆ. ಉದಾಹರಣೆಗೆ, ಇವರು ಕಲಾವಿದನೊಬ್ಬನಿಗೆ ತನ್ನ ಕಲೆಯಮೇಲಿನ ಪ್ರೀತಿ, ನಿಷ್ಠೆಗಳು ಹೇಗಿರಬೇಕು ಎಂಬ ವಿಚಾರದಲ್ಲಿ, ಆಗಾಗ ಇರವಿಂಗ್ ಸ್ಟೋನ್ ರವರ Agony and escacy (ಮಹಾಶಿಲ್ಪಿ ಮೈಕೆಲ್ ಏಂಜೆಲ್ ನ ಜೀವನ ಕುರಿತಾದ್ದು) ಯಲ್ಲಿಯ ಅನೇಕ ಪ್ರಸಂಗಗಳನ್ನು ಉದಾಹರಿಸುತ್ತಾರೆ, ವಿಮರ್ಶಿಸುತ್ತಾರೆ. ಒಳ್ಳೆಯ ಸಾಹಿತ್ಯದಲ್ಲಿ ಇವರಿಗಿರುವ ಅಭಿರುಚಿಯೇ ಬಂದಿಶಗಳ ಬಗ್ಗೆ ಇವರಲ್ಲಿ ಒಲವು ಹುಟ್ಟಿಸಿರಬೇಕು. ಏಕೆಂದರೆ ಮೂಲತಃ ವಾದಕರಾದ ಇವರಿಗೆ ಬಂದಿಶಗಳ ಸಾಹಿತ್ಯ, ಅದರಲ್ಲಿಯ ಭಾವಾಭಿವ್ಯಕ್ತಿಯ ಬಗ್ಗೆ ಬಹಳ ಕಾಳಜಿಯಿದೆ. ವಾದಕರಿಗೆ, ರಾಗದ ರೂಪವನ್ನು ಅಭಿವ್ಯಕ್ತಿಗೊಳಿಸಲು 'ಸ್ವರಗಳ ಸಮೂಹಗಳು' ಸಾಕು. ಗಾಯಕನೊಬ್ಬ ಸಾಹಿತ್ಯವನ್ನು ಉಚ್ಚರಿಸಬೇಕಾದಾಗ ವಹಿಸಲೇಬೇಕಾದ ಎಚ್ಚರಿಕೆ, ಸಾಮಾನ್ಯವಾಗಿ ವಾದಕರಿಗಿರಬೇಕಾಗಿಲ್ಲ. ಆದರೆ, ಪಿಟೀಲು ನುಡಿಸುವಾಗ ಎಚ್ಚರಿಕೆಯಿಂದ ಸಾಹಿತ್ಯವನ್ನುಪಯೋಗಿಸಿ, ಅವುಗಳ ಉಚ್ಚಾರ ಪಿಟೀಲಿನಲ್ಲಿ ನುಡಿಯುವಂತೆ ಮಾಡಿ, ಗಾಯಕೀ ಅಂಗದಲ್ಲಿ ಪಿಟೀಲು ನುಡಿಸಿದ್ದೇ ಪಂಡಿತರ ಮಹತ್ತರವಾದ ಸಾಧನೆ.

ಹೊಸ ಹೊಸ ಬಂದಿಶಗಳ ಸಂಗ್ರಹಣೆಯಿಂದಾಗಿ ರಾಗದ ಸಮಗ್ರ ಪರಿಚಯ ಮಾಡಿಕೊಳ್ಳಬಹುದೆಂಬುದು ಪಂಡಿತರ ಅಚಲ ನಿಲುವು. ಸಮಗ್ರ ಪರಿಚಯವೆಂದರೆ ಆರೋಹ-ಅವರೋಹ, ವಾದಿ-ಸಂವಾದಿ ರೀತ್ಯಾ ಅಲ್ಲ, ಆದರೆ ಅವುಗಳ ವಾಕ್ಯರಚನೆ, ಮುಖ್ಯಾಂಗಗಳರೀತ್ಯಾ ಅರಿಯುವುದು. ತಾನು ಸಂಗೀತಕಾರ್ಯಕ್ರಮಗಳಿಗೆಂದು ಹೋದ ಊರಿನಲ್ಲಿ, ಯಾವುದಾದರೂ ಸಂಗೀತಜ್ಞರಲ್ಲಿಗೆ ಹೋಗಿ ಬಂದಿಶಗಳನ್ನು ಸಂಗ್ರಹಿಸುವ ಪ್ರವೃತ್ತಿ ಬೆಳೆಸಿಕೊಂಡಿದ್ದರು. ಬಂದಿಶ ಸಂಗ್ರಹಿಸುವಾಗ ಸಾಹಿತ್ಯದ ಜೊತೆಜೊತೆಗೇ, ಅದನ್ನು ಎದುರಿನಲ್ಲಿರುವವರು ಹಾಡಿದಂತೆ ಸ್ವರಲಿಪಿಯಲ್ಲಿ ಬರೆದುಕೊಳ್ಳುವ ಅಪೂರ್ವ ಕುಶಲತೆಯಿತ್ತು. ಗುನಿಜನರನ್ನು ಭೇಟಿಯಾಗಿ ಜ್ಞಾನ ಸಂಪಾದಿಸುವ ಪ್ರಯತ್ನದಲ್ಲೇ ಇರುತ್ತಿದ್ದ ಪಂಡಿತರಲ್ಲಿ ಅನೇಕ ಅಪೂರ್ವವಾದ ಬಂದಿಶಗಳಿವೆ. ಗೋಪಾಲ ನಾಯಕ, ತಾನಸೇನ, ಬೈಜೂ, ಹರಿವಲ್ಲಭಜೀ, ಚಿಂತಾಮಣಿ, ಲಗನಪಿಯಾ (ವಾಜೀರ ಹುಸೇನ) ಮುಂತಾದವರ ಅಪರೂಪದ ಬಂದಿಶ(ಧೃಪದ ರಚನೆ)ಗಳಿವೆ. ಬೇರೆ ಬೇರೆ ಘರಾನಾಗಳ ಮಹತ್ವವನ್ನು ಕಾಣಿಸುವ ಅನೇಕ ಬಂದಿಶಗಳಿವೆ.

ಕಲಾಸಕ್ತಿಯ ತುತ್ತ ತುದಿಯನ್ನು ಮುಟ್ಟಿದ ಉತ್ತಮರಲ್ಲೊಬ್ಬರ ಅಪರೂಪದ ಠುಮ್ರಿ ರತ್ನವೊಂದು ಪಂಡಿತರ ಸಂಗ್ರಹದಲ್ಲಿದೆ. ಪಂಡಿತರು ಸಂಗೀತಪರೀಕ್ಷಕರಾಗಿ ಅಲಹಾಬಾದಿಗೆ ಹೋಗಿದ್ದರು. ಅಲ್ಲಿಯ ಹಿರಿಯ ಸಂಗೀತಗಾರರೊಬ್ಬರನ್ನು ಭೇಟಿಯಾಗಿ ರಾಗ ಪಿಲುವಿನಲ್ಲಿ, ವಾಜೀರ ಅಲಿ ಶಾಹನಿಂದ ರಚಿತವಾದ 'ತರಫ ತರಫ ಸಗರೀ ರೈನ ಗುಜರೀ ಕೌನ ದೇಸಗಯೇ ಸಾಂವರಿಯಾ' ಎಂಬ ಠುಮ್ರಿಯನ್ನು ಸಂಪಾದಿಸಿದ್ದರು. ಈ ಠುಮ್ರಿಯ ಐತಿಹಾಸಿಕ ಮಹತ್ವವೇನೆಂದರೆ, ಠುಮ್ರಿ

ಗಾಯನ ಶೈಲಿಯನ್ನು ವಿಕಾಸಮಾಡಿ, ಪ್ರಚಾರಕ್ಕೆ ತಂದ ವಾಜೀರ ಅಲಿ ಶಾಹ, ಬ್ರಿಟಿಷರಿಂದ ರಾಜ್ಯಭ್ರಷ್ಟನಾದಾಗ, ಇದನ್ನು ರಚಿಸಿ, 'ಒಂದು ಒಳ್ಳೆಯ ಬಂದಿಶ ಹುಟ್ಟಿತು, ಇದರ ಮುಂದೆ ರಾಜ್ಯ ನನಗ್ಯಾಕೆ?' ಎಂದನೆಂಬ ಪ್ರತೀತಿ ಇದೆ.

ಒಮ್ಮೆ ಅಲಹಾಬಾದಿಗೆ ಸಂಗೀತಕಾರ್ಯಕ್ರಮಕ್ಕೆಂದು ಹೋದ ಪಂಡಿತರು, ಅಲ್ಲಿಯ ಮಹಾನ್ ಗಾಯಕ ಪಂ.ಭೋಲಾನಾಥ ಭಟ್ಟರನ್ನು ಸಂಪರ್ಕಿಸಿ, ಭೈರವೀ ರಾಗದ 'ನೀಂದಿಯಾ ಆಯಿರಿ'ಎಂಬ ಠುಮ್ರಿಯನ್ನು ಪಡೆದಿದ್ದರು. ಸಿರ್ಸಿಯಲ್ಲಿ ತನ್ನ ಶಿಷ್ಯೆಯೊಬ್ಬರಿಗೆ ಸಂಗೀತ ಪಾಠ ಮಾಡುವಾಗ ಇದೇ ಠುಮ್ರಿಯನ್ನು ಕಲಿಸುತ್ತಿದ್ದರು. ಆಗ ಪಿಟೀಲು ಕಲಿಯುವ ಆಶಯದಿಂದ ಒಬ್ಬ ವ್ಯಕ್ತಿ ಅಲ್ಲಿಗೆ ಬಂದರು. ಜೀವನದಲ್ಲಿ ಆಘಾತದಿಂದ ನೊಂದ ಅವರಿಗೆ ವರ್ಷಾನುಗಟ್ಟಲೆ ನಿದ್ದೆಯೇ ಬಂದಿರಲಿಲ್ಲವಂತೆ. ಮರುದಿನ ಪಂಡಿತರಲ್ಲಿಗೆ ಬಂದ ಅವರು 'ಈ ಠುಮ್ರಿಯನ್ನು ಕೇಳಿದ ನಾನು ನಿನ್ನೆ ಸರಿಯಾಗಿ ನಿದ್ದೆ ಮಾಡಿದೆ. ನನಗೆ ಈ ರಚನೆಯನ್ನು ಕಲಿಸಿ' ಎಂದರು. ಒಳ್ಳೆಯ ಬಂದಿಶನಲ್ಲಿ ಅದೆಷ್ಟು ಸುಖ(soothing) ಇದೆ ಎಂಬುದನ್ನು ತಿಳಿಯಲು ಇದೊಂದು ಪ್ರಸಂಗವೇ ಸಾಕ್ಷಿ.

ಶ್ರೀ ನಾರಾಯಣ ಪಂಡಿತರು ತಮ್ಮ ೨೫ನೇ ವಯಸ್ಸಿನಲ್ಲೇ ಉತ್ತಮ ಪಿಟೀಲು ವಾದಕರಾಗಿ ರೂಪುಗೊಂಡಿದ್ದರು. ಇದರ ಜೊತೆಗೆ ಪ್ರಬುದ್ಧ ಕಲಾವಿದನಾಗಿ ಬೆಳೆಯುವ ಹಂಬಲದಲ್ಲಿ ದೂರದರ್ಶನದ ಕೆಲವು ಮರಾಠಿ ಧಾರವಾಹಿಗಳಿಗೆ ಸಂಗೀತ ನಿರ್ದೇಶನ ಮಾಡಿದರು. ಆದರೆ ಇವರ ಸ್ವಭಾವಕ್ಕೆ ವಿರುದ್ಧವಾಗಿ ಅನೇಕ ಸಂಗೀತಿಕ ಅಂಶಗಳ ಜೊತೆ ಹೊಂದಾಣಿಕೆ ಮಾಡಿಕೊಳ್ಳುವುದು ಕಷ್ಟವೆನಿಸುತ್ತಿತ್ತು. ಕಲಿಯಲ್ಲಿ ಪ್ರಬುದ್ಧತೆ ಹೊಂದಲು ಸ್ವರದ ಸುಂದರ ರೂಪಗಳನ್ನು ನೋಡುವುದು, ಅವುಗಳನ್ನು ವಿಶ್ಲೇಷಿಸುವುದು ಬಹು ಆಗತ್ಯವಾದ ಅಂಶ. ಸ್ವರಗಳ ಸುಂದರ ರೂಪಗಳ ಪ್ರಸ್ತುತಿಗೆ ಲಯದ ಬಗೆಗಿನ ತಿಳಿವಳಿಕೆ ತುಂಬಾ ಅವಶ್ಯಕವಾಗಿರುತ್ತದೆ. ಇದರ ಮೇಲೆ ಪ್ರಭುತ್ವ ಹೊಂದಿದಾಗಲೇ 'ಭಾವಸೌಂದರ್ಯ(aesthetics)'ವನ್ನು ಸರಿಯಾದ ರೀತಿಯಲ್ಲಿ ಪ್ರತಿಪಾದಿಸಲು ಸಾಧ್ಯ. ಬಂದಿಶನ ನಿರ್ಮಿತಿ(structure)ಯನ್ನು ತಿಳಿಯಬೇಕೆಂದರೆ, ಸ್ವರಗಳೊಳಗಿನ ಸಂಬಂಧಗಳ ಜೊತೆ ತಾಳದಲ್ಲಿಯ ಲಯದ ಜೋಲಿಯನ್ನೂ ತಿಳಿದು ಅನುಭವಿಸಬೇಕು. ಇವುಗಳನ್ನು ಅರಿತ ಪಂಡಿತರು ತಾನು ಕೇಳಿದ ಸಂಗೀತದಿಗ್ಗಜರ ಕಚೇರಿಗಳನ್ನು ವಿಮರ್ಶಾತ್ಮಕವಾಗಿ ಅವಲೋಕಿಸಿದರು, ಪರಾಮರ್ಶಿಸಿದರು. ಈ ದಿಶೆಯಲ್ಲಿ ಕೆಲವು 'ಡೊಕ್ಯುಮೆಂಟರಿ(documentary)'ಗಳಿಗೆ ಸಂಗೀತ ಸಂಯೋಜಿಸಿದರು. ಈ ಕೆಲಸ ಮಾಡುವಾಗ ಲಯದಲ್ಲಿಯ ವಿವಿಧ ರೂಪ(rhythm pattern)ಗಳನ್ನು ಕಂಡುಕೊಳ್ಳುವ ಪ್ರಯತ್ನ ಅವರದಾಗಿರುತ್ತಿತ್ತು. ಡೊಕ್ಯುಮೆಂಟರಿಗಳಿಗೆ ಸಂಗೀತ ಸಂಯೋಜಿಸುವಾಗ ಒಂದು 'ನಿಗದಿತ ಸಮಯ'ದಲ್ಲಿ , ನಿಗದಿತ ಲಯದಲ್ಲಿ, ನಿರ್ದಿಷ್ಟ ತಾಳದಲ್ಲಿ ಎಷ್ಟು ಆವರ್ತನೆಗಳಾಗುತ್ತವೆ? ಎಂಬ ಲೆಕ್ಕ ಪಕ್ಕಾ ಇರಬೇಕಾಗುತ್ತದೆ. ಗಾಯಕನಿಗೆ ಅಥವಾ ವಾದಕನಿಗೆ ತಾಳದ ಬಗೆಗಿನ ಹೆದರಿಕೆ ಹೋದಾಗಲೇ ಆತನಿಗೆ ತನ್ನ ಸಂಗೀತ ಕಚೇರಿಗಳಲ್ಲಿ ಉತ್ಸ್ಫೂರ್ತಿ ಬರಲು ಸಾಧ್ಯವಾಗುತ್ತದೆ. ತಾಳದ ಬಗೆಗಿನ ಹೆದರಿಕೆ ಹೋಗಬೇಕಾದರೆ ಲಯದಲ್ಲಿ ಪ್ರಭುತ್ವ ಸಾಧಿಸಬೇಕು. ಇದು ಅನುಭವದಿಂದ ಸಾಧ್ಯ, ಆದರೆ ಕೆಲವು ಸಾಮಾನ್ಯ ಸೂತ್ರಗಳಿಂದ, ಅವುಗಳ ಅಭ್ಯಾಸದಿಂದ 'ಬಹುಬೇಗ' ಸಾಧಿಸಲು ಸಾಧ್ಯವೆಂದು ನಂಬುತ್ತಾರೆ. ಆದ್ದರಿಂದ ತನ್ನ ಅನುಭವದಿಂದ ಹಲವು ಲಯಸೂತ್ರಗಳನ್ನು ಕಂಡುಹಿಡಿದಿದ್ದಾರೆ.

ಧ್ವನಿಸಂಸ್ಕರಣೆ(voice culture)ಯ ದೃಷ್ಟಿಯಲ್ಲಿ, ಬರೀ ಮಂದ್ರಸಾಧನೆ ಮಾಡುವುದರಿಂದ, ತಾರ ಸ್ವರಗಳೆಲ್ಲ ಸ್ಫುಟವಾಗಿ ತಾಗುತ್ತವೆ ಎಂಬ ಮಾತಿಗಿಂತ ಧ್ವನಿಯ ಏರಿಳಿತ(modulation)ಗಳಿಗಾಗಿ ಹೆಚ್ಚು ಹೆಚ್ಚು ಬಂದಿಶಗಳನ್ನು ಕಲಿಯಬೇಕೆಂಬುದು ಪಂಡಿತರ ವಾದ. ತನ್ನ ವಿದ್ಯಾರ್ಥಿಗಳ ಮೇಲೆ ತನ್ನ ಈ ವಿಚಾರದ ಪ್ರಯೋಗ ಮಾಡಿ ಉತ್ತಮ ಪರಿಣಾಮಗಳನ್ನು ಪಡೆದಿದ್ದಾರೆ.ಇವರಿಗೆ ೬೫ನೇ ವಯಸ್ಸಿನ ಆಸುಪಾಸಿನಲ್ಲಿ ಅನಾರೋಗ್ಯದ ತೊಂದರೆಯಿಂದಾಗಿ, ಪಿಟೀಲಿನ ಕಮಾನು ಹಿಡಿಯುವುದೇ ಅಸಾಧ್ಯವಾಯಿತು. ಪಿಟೀಲು ನುಡಿಸುವುದನ್ನೇ ಕೈಬಿಡಬೇಕಾಯಿತು. ಧೃತಿಗೆಡದ ಇವರು

ಬೊಂಬಾಯಿಯಿಂದ ಹುಟ್ಟೂರಾದ ಗೋಕರ್ಣಕ್ಕೆ ಬಂದು ನೆಲಸಿದರು. ಸಿರ್ಸಿಯಲ್ಲಿ ಸಂಗೀತ ತರಗತಿಗಳನ್ನು ನಡೆಸಿದರು. ಕೆಲವು ವಿದ್ಯಾರ್ಥಿನಿಯರಿಗೆ ರಾಗದ ರೂಪ-ರೇಷೆಗಳನ್ನು ಸರಿಯಾಗಿ ತಿಳಿಸಲು, ಶೃಂಗಾರ ರಸವಿರುವ ಹಳೆಯ ಬಂದಿಶಗಳನ್ನು ಹೇಳಲು ಮುಜುಗರವೆನಿಸಿ, ಒಂದೆರಡು ಬಂದಿಶಗಳನ್ನು ರಚಿಸಿ ಕಲಿಸಿದರು. ಶಿಷ್ಯರಿಂದ ಸಿಕ್ಕ ಉತ್ತಮ ಪ್ರತಿಕ್ರಿಯೆಯಿಂದ ಉತ್ತೇಜನ ಸಿಕ್ಕಂತಾಗಿ, ಕಳೆದ ಹದಿನೈದು ವರ್ಷಗಳಲ್ಲಿ ನೂರೈವತ್ತಕ್ಕೂ ಹೆಚ್ಚು ಉತ್ತಮ ಬಂದಿಶಗಳು ಇವರಿಂದ ರಚಿತವಾಗಿವೆ. ಇವುಗಳಲ್ಲಿ ತರಾನಾ, ಠುಮ್ರಿ, ಚತುರಂಗ ಮುಂತಾದವುಗಳೂ ಸೇರಿವೆ.

ಸಂಗೀತದಲ್ಲಿಯ ಪಂಡಿತರ ಭಾಷೆ, ಭಾಷ್ಯವೇ ಬೇರೆ ತೆರನಾದ್ದು. ಅವರ ರಚನೆಗಳನ್ನು ಅವರಿಂದ ಕಲಿಯುವಾಗ ಅಲ್ಲೊಂದು ಶಿಲ್ಪ ಕಲಾಕೃತಿ, ಸುಂದರವಾದ ಬಣ್ಣಗಳಿಂದ ರಚಿತವಾದ ವರ್ಣರಂಜಿತ ಚಿತ್ರಕಲಾಕೃತಿ, ನೃತ್ಯದ ವಿಶಿಷ್ಟ ಭಂಗಿಗಳು, ಸೃಜನಾತ್ಮಕ ಸಾಹಿತ್ಯದ ತುಣುಕಗಳು, ಇತ್ಯಾದಿಗಳು ಇಣುಕುತ್ತವೆ. ಅವರು ನನಗೆ ಅವರ ಬಂದಿಶಗಳನ್ನು ಹೇಳಿಕೊಡುವಾಗಿನ ಕೆಲವು ವಾಕ್ಯಗಳಂತೂ ಅವಿಸ್ಮರಣೀಯವಾದವು.

\# ಸಂಗೀತಗಾರನಿಗೆ ತನ್ನ ಮೂಲ ಮೌಲ್ಯಗಳನ್ನು, ವಿಚಾರಗಳನ್ನು, ಭಾವನೆಗಳನ್ನು ತನ್ನ ಹಾಗೂ ಇತರರ ಜೊತೆ ಹಂಚಿಕೊಳ್ಳಲು ಸಂಗೀತವೊಂದು ಸಾಧನ.

\# ಸೃಜನಾತ್ಮಕವಾದ ಪ್ರಯೋಗಗಳಿಗೆ, ಸಂಗೀತದಲ್ಲಿಯ ವ್ಯಾಕರಣ (ರಾಗದಲ್ಲಿ ಬರುವ ಸ್ವರಗಳು, ಅದರ ನಡೆ, ಇತ್ಯಾದಿ) ತಿಳಿದಿರಬೇಕು. ಆದರೆ ವ್ಯಾಕರಣವನ್ನು ಪ್ರಸ್ತುತಗೊಳಿಸುವುದೇ ಉತ್ತಮ ಸಂಗೀತವಾಗುವುದಿಲ್ಲ.

\# ಠುಮ್ರಿಯಲ್ಲಿ ಖ್ಯಾಲಿನಲ್ಲಿರುವ ಭಾವನೆಗಳನ್ನು ಇನ್ನೂ ಹೆಚ್ಚಾಗಿ ಉದಾತ್ತೀಕರಿಸಲಾಗುತ್ತದೆ. ಇದು ಭಾವಕ್ಕೆ ಮತ್ತೂ ಹತ್ತಿರ.

\# ಟಪ್ಪಾ ಎಂದರೆ ಠುಮ್ರಿಯಲ್ಲಿರುವ ವಿಚಾರವನ್ನೇ ಸಮರ್ಝಾಯಿಸಿ, ವಿಸ್ತರಿಸಿ ದೃತಗತಿಯಲ್ಲಿ ಹಾಡುವುದು.

\# ಮಾನವ ಸೌಂದರ್ಯವನ್ನು ವಿವಿಧ ಬಾಹ್ಯ ವಸ್ತುಗಳಲ್ಲಿ ಕಾಣುವ ಪ್ರಯತ್ನ ಮಾಡುತ್ತಾನೆ. ಆದರೆ ನಿಜವಾದ ಸೌಂದರ್ಯ ಆತನ ಅಂತರ್ಯದಲ್ಲಿದೆ. ಹೃದಯದಾಳದಲ್ಲಿ ಇರುವುದು 'ಆರ್ದ್ರತೆ' ಮಾತ್ರ. ದುಃಖದಲ್ಲೂ ಶಾಂತಿಯಿದೆ, ಆನಂದವಿದೆ. ಹೊರಗಿನ ಕವಚಗಳನ್ನೆಲ್ಲಾ ಕಳಚುತ್ತಾ ಹೋದಂತೆ ಒಳಗೆ ಇರುವುದು ಶಾಂತಿಯೊಂದೆ. ಹಾಗೂ ಅದನ್ನು ಸಂಗೀತದ ಮೂಲಕ ಅಭಿವ್ಯಕ್ತಿಗೊಳಿಸಬಹುದು. ಆದ್ದರಿಂದ ಸಂಗೀತವು ಅಭಿಜಾತತೆಯಿಂದ ಕೂಡಿದೆ.

\# ಸಂಗೀತವು ಹರಿಯುವ ನೀರಿನಂತೆ. ಹೇಗೆ ನೀರನ್ನು ಮುಷ್ಟಿಯಲ್ಲಿ ಹಿಡಿಯಲಾಗದೆ, ಅದರ ತೇವಾಂಶವನ್ನು ಅನುಭವಿಸಬಹುದೋ ಹಾಗೆಯೇ ಸಂಗೀತವನ್ನು ಅನುಭವಿಸಬೇಕು. ಅದನ್ನು ಶಬ್ದಗಳಲ್ಲಿ ಹಿಡಿಯಲಾಗದು.

\# ಶುದ್ಧ ಗಾಂಧಾರದಲ್ಲಿ ಅದೆಂಥಾ ವೈರಾಗ್ಯ ಇದೆ ನೋಡು.

ಕೋಮಲ ರಿಷಭ ಹಚ್ಚುವಾಗ ಅದರಲ್ಲಿರುವ ಭೀಕರತೆಯನ್ನು ಕಾಣು.

ಪ್ರತಿಯೊಂದು ಸ್ವರವನ್ನು ಅನುಭವಿಸಿ ಹಾಡಬೇಕು.

ಒಂದೇ ಸ್ವರವನ್ನು ಪದೇ ಪದೇ ಹಚ್ಚುವಾಗಲೂ ಬೇರೆ ಬೇರೆ ಭಾವದಲ್ಲಿ ಹಚ್ಚಬೇಕು.

ಸ್ವರದಲ್ಲಿ ಮುಳುಗಬೇಕು. ಅದು ಎಣ್ಣೆಯಲ್ಲಿ ಅದ್ದಿದ ನೆಣೆಯಂತಿರಬೇಕು.

ಗಮಕ ಕಡಿಮೆ ಮಾಡಿ ಬರೇ ಸ್ವರ ಹಚ್ಚುವ ಪ್ರಯತ್ನ ಮಾಡಬೇಕು.

ಪ್ರತಿಯೊಂದು ತಾನಿನಲ್ಲಿಯೂ ಭಾವ ಅಡಗಿದೆ. ವೇಗದ ಬದಲಾವಣೆ(Speed variation)ಯಿಂದಾಗಿ ಭಾವ ಹೇಗೆ ಬದಲಾಗುತ್ತದೆ ನೋಡಬೇಕು.

ಒಂದು ಸ್ವರದಿಂದ ಇನ್ನೊಂದು ಸ್ವರಕ್ಕೆ ಹೋಗುವಾಗ ಅದರೊಳಗಣ ಸಂವಾದ ನೋಡು.

ಒಂದೊಂದು ರಾಗ ಅಂದ್ರೆ ಒಬ್ಬೊಬ್ಬ ವ್ಯಕ್ತಿ ಇದ್ದ ಹಾಗೆ. ಬರಿಯ ಆರೋಹ-ಅವರೋಹ-ವಾದಿ-ಸಂವಾದಿ ಅಂತಾ ಹಾಡಿದ್ರೆ ರಾಗದ ವ್ಯಾಕರಣ ಇಟ್ಟಂತೆ. ರೂಕ್ಷವಾಗುತ್ತದೆ ಗಾಯನ. ಆಯಾ ರಾಗದ ವ್ಯಕ್ತಿತ್ವವನ್ನು ವಿಶ್ಲೇಷಿಸಬೇಕು.

ಒಂದು ರಾಗದ ಪ್ರಸ್ತುತಿ ಎಂದರೆ ಒಂದು ನಿಬಂಧ ಬರೆದಂತೆ. ನುಡಿಗಟ್ಟು(Idiom) ಹಾಗೂ ವಾಕ್ಯಾಂಗ (Phrase) ಗಳನ್ನುಪಯೋಗಿಸಿ ವಾಕ್ಯಗಳ ರಚನೆಯಾಗಬೇಕು ತಾನೆ? ಶಬ್ದಕ್ಕೊಮ್ಮೆ ಪೂರ್ಣ ವಿರಾಮ ಕೊಟ್ಟರೆ ಹೆಂಗೆ? ಷಡ್ಜದಿಂದ ಹತ್ತಿರದ ಒಂದು ಸ್ವರ ಮುಟ್ಟಿ ಷಡ್ಜಕ್ಕೇ ಬಂದರೆ ಅದರರ್ಥವೇನು?.

ಮಾತನಾಡುವಾಗ ನಾವೇನು ಒಂದೇ ಸ್ತರದಲ್ಲಿ ಯಾವುದೇ ಏರಿಳಿತಗಳಿಲ್ಲದೇ ಮಾತನಾಡುತ್ತೇವೆಯೆ?ರಾಗ ವಿಕಾಸವಾಗಿದ್ದು, ಭಾವನೆ ವಿಕಾಸವಾಗಿದ್ದು ಕಾಣಿಸುವುದು ಬೇಡವೆ? ಬಂದಿಶದ ಮುಖಡಾ ಪ್ರತಿ ಆವರ್ತದಲ್ಲೂ ಬೇರೆ ರೀತಿಯಲ್ಲಿ ಹಾಡುವ ಪ್ರಯತ್ನ ಮಾಡುವುದು ಬೇಡವೇ?.

ಒಂದು ರಾಗವನ್ನು ಅದು ಇದ್ದಂತೆ, ಸಾಂಪ್ರದಾಯಿಕವಾಗಿ ನಾವು ಕಲಿತಂತೆ ಇಡುವುದು ಪ್ರಾಮಾಣಿಕತೆಯೇ ಆದರೂ, ಅಂದಿನ ನಮ್ಮ ಮೂಡಿಗೆ ತಕ್ಕಂತೆ ಇಟ್ಟರೆ ಪ್ರಾಮಾಣಿಕತೆಯ ಜೊತೆ ಉತ್ಸ್ಫೂರ್ತಿ ಇರುತ್ತದೆ.

ಇದು ನೋಡು 'ಮಾರವಾ'. ದಪ್ಪ ಹಾಗೂ ಸೀದಾ ಗೆರೆಗಳ ಚಿತ್ರ ಇದು.

ಇದು ಶ್ಯಾಮಕಲ್ಯಾಣ. ಏನು ಮಾಡಿದ್ರು ತಲೆ ತಗ್ಗಿಸಿ ಕುಳಿತುಬಿಡುತ್ತದೆ. ತೀವ್ರ ಮಧ್ಯಮ ಪ್ರಯೋಗದಿಂದ ಇದರಲ್ಲಿ ಅದೆಂತಹ ವಿವಶತೆ ಅಡಗಿದೆ ನೋಡು. ಇದು ನೋಡು ಶುದ್ಧಸಾರಂಗ. ಮೇಲ್ಮುಖವೇ ಯಾವಾಗಲೂ. ಶುದ್ಧ ಮಧ್ಯಮದ ಪ್ರಯೋಗ ಮಧ್ಯಾಹ್ನದ ಸುಡು ಬಿಸಿಲಿನ ತಾಪ ಅನುಭವಿಸಲು ಸಹಾಯಕವಾಗಿದೆ.

ಮಾರವಾ, ಏನು ಗಾಂಭೀರ್ಯ ಇದಕ್ಕೆ? ಅದೇ ಈ ಪುರಿಯಾದಲ್ಲಿ ಅದೆಂತಹ ಪ್ರಾಪಂಚಿಕ ವಾಸನೆಯಿದೆ. ಅಬ್ಬಾ! ಸೋಹೋನೀ ಯಲ್ಲಿ ಅದೆಂತಹ ಶರಣಾಗತಿ ಭಾವ. ಒಂದೇ ತಂದೆ-ತಾಯಿಗಳಲ್ಲಿ ಜನಿಸಿದ ಈ ಮೂವರು ಮಕ್ಕಳು ಅವೆಷ್ಟು ಭಿನ್ನ!

ರಾಗಗಳನ್ನೇ dissect ಮಾಡಿ ನೋಡು. ಕೇದಾರದಲ್ಲಿ ದುರ್ಗಾ ಹೇಗೆ ಅಡಗಿದ್ದಾಳೆ ನೋಡು.

ನಂದ? ಅದೆಂಥಾ ಕಷ್ಟ?.ಬಿಹಾಗನ್ನೇ ಬೇರೆ ರೀತಿ ಇಡುದು ಅಷ್ಟೆ!.

ಕೇದಾರ, ದುರ್ಗಾ, ಸಾರಂಗಗಳಲ್ಲಿ ಬರುವ ಮಧ್ಯಮ ಒಂದೇ. ಇಡುವ ಕ್ರಮ ಬೇರೆ ಅಷ್ಟೆ!. ಸಂವಾದಕ್ಕಾಗಿ ಬರುವ ಸ್ವರಗಳು ಬೇರೆ.

ಪ್ರತಿಯೊಂದು ರಾಗದಲ್ಲೂ ಜಾನಪದದ ಒಂದು ಟೋನ ಇದೆ. ಅದಕ್ಕೆ ಬೇರೆ ಬೇರೆ ಬಣ್ಣಗಳ shades ಕೊಟ್ಟು ರಾಗ ಮಾಡಿರುವುದು.

ರಾಗದಲ್ಲೂ drama ಇದೆ ನೋಡು. ನೃತ್ಯದ ಕಲ್ಪನೆಯಿದೆ ನೋಡು. ಡಾನ್ಸ ಕಲ್ತವ್ಳಲ್ಲೇ ನೀನು. ಅದರ ಪ್ರಯೋಗ ಇಲ್ಲಾಗಲಿ.

ಇರುವೆಗೂ ಆನೆಗೂ ಇರುವ ವ್ಯತ್ಯಾಸ, ಸಣ್ಣ ಮೂರ್ತಿಗೂ ದೊಡ್ಡ ಮೂರ್ತಿಗೂ ಇರುವ ವ್ಯತ್ಯಾಸ ರಾಗಗಳಲ್ಲೂ ಇದೆ. ಕೆಲವು ರಾಗಗಳ ರಚನೆಯೇ ಸಣ್ಣದು. ಉದಾಹರಣೆಗೆ ನಾಟ, ಗೌರೀ, ಗಾಂಧಾರೀ, ದೇವಗಾಂಧಾರ, ಧಾನೀ, ದೇಸ್ಕಾರ ಮುಂತಾದವುಗಳ ರಚನೆಯೇ ಸಣ್ಣ. ಒಟ್ಟಾರೆ ಆಲಾಪ ಮಾಡಿ, ರಾಗ ಬೆಳೆಸಿದರೆ, ಹಿಂಜಿದರೆ ಅಸಂಗತ ವಾಗುತ್ತದೆ. ಮಾಲಕೌಂಸ, ಕಲ್ಯಾಣ, ಬಿಹಾಗ, ಕಾಫೀ, ಭೈರವ ಮುಂತಾದ ಪ್ರಬುದ್ಧ ರಾಗಗಳನ್ನು ಎಷ್ಟಾದರೂ ಹಿಂಜಬಹುದು.

ಕೆಲವು ಬಂದಿಶಗಳು ಸಭೆಗಾಗಿ,ಇನ್ನು ಕೆಲವು ವಿದ್ವತ್ ಇರುವ ಅನುಭವಿಗಳಿಗಾಗಿ, ಇನ್ನು ಕೆಲವು ನಾವೊಬ್ಬರೇ ಇದ್ದಾಗ ಹಾಡಿಕೊಳ್ಳಲು, ಇನ್ನು ಕೆಲವು, ನಮಗೆ ಫಜೀತಿ ಹಿಡಿಸಿಯೇ ತೀರುವೆನೆಂಬ ಪಕ್ಕವಾದ್ಯದವರಿಗಾಗಿ ಇಟ್ಟುಕೊಳ್ಳಬೇಕು.

ಸಂಗೀತವನ್ನು ಮೂರು ಸ್ತರಗಳಲ್ಲಿ ಹಾಡುವುದನ್ನು ನಾವು ಕಾಣಬಹುದು. ಒಂದು ಸಾಹಿತ್ಯದ್ದು, ಇನ್ನೊಂದು ತಾಳದ್ದು, ಮತ್ತೊಂದು ಸ್ವರದ್ದು. ಒಮ್ಮೊಮ್ಮೆ ಒಂದೊಂದು ಮುಂದೆ ಬರುತ್ತದೆ. ಆದಷ್ಟು ಸ್ವರದಲ್ಲೇ ಹಾಡುವುದನ್ನು ಕಲಿಯಬೇಕು.

ಬಂದಿಶಗಳಲ್ಲಿ ಬರುವ ಕಮಾನು (arc), ಸಮಸಂಗತಿ ಚಿತ್ರ(symmetrical design), ರಚನಾ ಸೌಂದರ್ಯ (structural beauty)ಗಳನ್ನು ಗುರುತಿಸಿದರೆ ಆ ರಚನೆಗಳಿಗೆ ನ್ಯಾಯವನ್ನೊದಗಿಸಬಹುದು.

-ಇತ್ಯಾದಿಗಳು.

ಸ್ವರದಲ್ಲಿಯ ಸುಂದರ ಭಾವನೆಗಳನ್ನು ಕಾಣಿಸಲು ಕೆಲವು ಠುಮ್ರಿ-ಟಪ್ಪಾಗಳನ್ನು ಹಾಗೂ ಅದರಲ್ಲಿಯ ನಿಗೂಢತೆಯನ್ನು, ಆಳವನ್ನು ತೋರಿಸಲು ಕೆಲವು ನಿರ್ಗುಣೀ ಭಜನೆಗಳನ್ನೂ ಪಂಡಿತರು ನನಗೆ ಹೇಳಿಕೊಟ್ಟಿದ್ದಾರೆ.

ಶ್ರೀ ನಾರಾಯಣ ಪಂಡಿತರು, ತತ್ವಜ್ಞಾನಿಯ ವಿಶೇಷ ಗುಣಗಳನ್ನು ಹೊಂದಿದ್ದರೂ ಕೂಡ ಒಬ್ಬ ಭಾವಜೀವಿಯಾಗಿ ತೆರೆದುಕೊಳ್ಳುತ್ತಾರೆ. ಇಷ್ಟೆಲ್ಲ ಪಾಂಡಿತ್ಯ ಹೊಂದಿದ್ದರೂ, ಪ್ರಯೋಗಶೀಲ, ಸಂಶೋಧನಾಶೀಲರಾಗಿದ್ದರೂ ಇವರೊಬ್ಬ ಸರಳ, ಸಾಧುಜೀವಿ. ಸ್ನೇಹಮಯಿ, ಭಾವನಾಸಮೃದ್ಧರಾದರೂ ಬುದ್ಧಿವಂತಿಕೆಯ ಅಂಶವನ್ನು ಗೌರವಿಸುತ್ತಾರೆ. ಶಾಸ್ತ್ರೀಯ ಸಂಗೀತವೇ ಉಸಿರಾದರೂ, ಲಘುಶಾಸ್ತ್ರೀಯ ಸಂಗೀತ, ಲಘು ಸಂಗೀತಗಳಲ್ಲಿ ಒಲವಿದೆ. ಹೊಸ ಹೊಸ ವಿಚಾರಗಳನ್ನು ಸೇರಿಸಿ, ಹೊಸ ಆಯಾಮಗಳನ್ನು ಹೊಂದಿ ರಿಯಾಜ ಮಾಡುವುದರ ಬಗ್ಗೆ ಮನವಿದೆ. ಕಟ್ಟಾ ಸಂಪ್ರದಾಯಸ್ಥರೇ ಆದರೂ, ಹೊಸ ಪ್ರಯೋಗಗಳ ಬಗ್ಗೆ ಆದರವಿದೆ. ಜ್ಞಾನನಿಧಿಯಾದುದರಿಂದ ಇನ್ನೊಬ್ಬರ ಸಂಗೀತವನ್ನು ಸಾಮಾನ್ಯ ಶ್ರೋತೃಗಳಂತೆ ಪ್ರೀತಿಯಿಂದ ಆಲಿಸುತ್ತಾರೆ. ಮಾನ್ಯ ಪಂಡಿತರು ಕೇವಲ ವಯೋವೃದ್ಧರಷ್ಟೇ ಅಲ್ಲ, ಜ್ಞಾನವೃದ್ಧರೂ, ಅನುಭಾವಿಗಳೂ ಕೂಡ.

೭೬ರ ಹರೆಯದಲ್ಲೂ ಶ್ರೀ ನಾರಾಯಣ ಪಂಡಿತರು ಅತ್ಯಂತ ಲವಲವಿಕೆಯಿಂದಿದ್ದಾರೆ. ಸ್ವಂತ ಮಕ್ಕಳಿಲ್ಲದ ಇವರಿಗೆ ಶಿಷ್ಯರೇ ಮಕ್ಕಳು. ಅಷ್ಟು ಅಕ್ಕರೆಯಿಂದ ನೋಡುತ್ತಾರೆ. ಇವರಲ್ಲಿಗೆ ಸಂಗೀತ ಕಲಿಯಲೆಂದು ಬಂದ ಕೆಲವು ವಿದ್ಯಾರ್ಥಿಗಳಿಗೆ ಇವರೇ ತಂಬೂರಿ ಕೊಡಿಸಿದ ನಿದರ್ಶನಗಳಿವೆ. 'ಪಡೆದ ಜ್ಞಾನವನ್ನು ದಾನ ನೀಡುವಾಗ ಧನಲಾಭದ ಲೆಕ್ಕಾಚಾರ ಸಲ್ಲದು, ಅಷ್ಟೇ ಅಲ್ಲ ಸಾಧಕನಿಗೆ ಮನಸ್ಸನ್ನು ವಿಚಲಿತಗೊಳಿಸುವ ಸಾಧನಗಳು ಕಡಿಮೆಯಿರಬೇಕು' ಎಂಬ ತತ್ವವನ್ನು ಗಟ್ಟಿಯಾಗಿ ನಂಬಿ ತನ್ನಲ್ಲಿ ಬರುವ ಸಂಗೀತಾರ್ಥಿಗಳಿಗೆ ವಿದ್ಯಾದಾನ, ಜ್ಞಾನದಾನ ಮಾಡುತ್ತಿದ್ದಾರೆ.

'ಕಲಾಕಾರನಿಗೆ ಸಂಸಾರದ ಜವಾಬ್ದಾರಿ ಕಡಿಮೆ' ಎಂಬ ಮಾತಿಗೆ ಪಂಡಿತರೊಂದು ಅಪವಾದ. ವೃದ್ಧರಾದ ತಂದೆ ತಾಯಿಯರ ಸೇವೆ ಮಾಡಿದರು. ಕಾರ್ಯನಿರತ ತಂದೆಗೆ ವೃದ್ಧಾಪ್ಯದಲ್ಲಿ ಒಂಟಿಭಾವನೆ ಕಾಡಬಾರದೆಂದು, ಅವರಿಗೆ ದಿನಪತ್ರಿಕೆಗಳನ್ನು ಓದಿ ಹೇಳುತ್ತಿದ್ದರು. ಅವರ ಜೊತೆ ಸಂಗೀತಿಕ ವಿಚಾರಗಳನ್ನು ಚರ್ಚಿಸುತ್ತಿದ್ದರು. ಹಳ್ಳಿಯಿಂದ ಬಂದ ಮುಗ್ಧ ಬಾಳಸಂಗಾತಿ ಸವಿತಾರನ್ನು ಪ್ರೀತಿ, ಗೌರವಗಳಿಂದ ನೋಡಿ, ತನ್ನ ಅಭಿರುಚಿಗಳಿಗೆ ಹೊಂದುವ ಮಡದಿಯಾಗಿ ರೂಪಿಸಿಕೊಂಡಿದ್ದರು. ತನ್ನೆಲ್ಲ ಸಂಸಾರಿಕ ಜವಾಬ್ದಾರಿಗಳನ್ನು ಆಕೆಯೊಂದಿಗೆ ಹಂಚಿಕೊಂಡಿದ್ದರು. ಒಡಹುಟ್ಟಿದವರ ಕಷ್ಟಗಳಲ್ಲಿ ನೆರವಾಗಿ, ಅವರೆಲ್ಲರ ಮಕ್ಕಳನ್ನು ಬಹುಮಟ್ಟಿಗೆ ಸಾಕುವ ಜವಾಬ್ದಾರಿಯನ್ನು ನಿರ್ವಹಿಸಿದ್ದಾರೆ. ಸಂಸಾರದಲ್ಲಿ ಇಷ್ಟೆಲ್ಲಾ ಕಾಳಜಿ ಇದ್ದರೂ, 'ನಿರ್ಲಿಪ್ತತೆ' ಇವರಿಗಿದ್ದ ದೊಡ್ಡ ಗುಣ. 'ಪ್ರಪಂಚದಲ್ಲಿ ಪ್ರೀತಿಯಿರಬೇಕು. ಕರ್ತವ್ಯಲೋಪವಾಗಬಾರದು. ಆದರೆ ಅದಕ್ಕೇ ಅತಿಯಾಗಿ ಅಂಟಿಕೊಳ್ಳುವುದು ಸಂಗೀತಾರಾಧಕನಿಗೆ ಸಲ್ಲದು' ಎಂಬುದು ಇವರು ನಡೆಸಿಕೊಂಡು ಬಂದ ಜೀವನ. ಜನ್ಮಕೊಟ್ಟ ತಾಯಿ, ಸಹಬಾಳ್ವೆ ನಡೆಸಿದ ಮಡದಿ ಕೊನೆಯುಸಿರೆಳೆದಾಗ 'ಜೀವನವೇ ಒಂದು ಪಯಣ. ಎಲ್ಲರೂ ಅವರವರ ನಿಲ್ದಾಣದಲ್ಲಿ ಇಳಿಯಲೇಬೇಕು' ಎಂದು ಸಮಾಧಾನಗೊಂಡರು. ತನ್ನ ನಿಲ್ದಾಣ ಬರುವ ತನಕ ತಾನು ಪ್ರಯಾಣಿಸಲೇಬೇಕು, ಶುಷ್ಕತೆಯಿಂದಲ್ಲ, ಆದರೆ ಸಂಗೀತ ಪಿಪಾಸುವಾಗಿ ಎಂದುಕೊಂಡರು. ವಕೀಲ ವೃತ್ತಿಯಲ್ಲೂ ಶ್ರದ್ಧೆಯಿಂದ ದುಡಿದು, ಸಂಗೀತದಲ್ಲೂ ಮಹತ್ತರ ಸಾಧನೆಗೈದರು. ಪಿಟೀಲುವಾದನದಲ್ಲಿ ಉತ್ತಮ ಪ್ರದರ್ಶನಗಳನ್ನು ನೀಡಿದುದಷ್ಟೇ ಅಲ್ಲದೆ, ಸಂಗೀತದಲ್ಲಿ ಆಳವಾದ ಜ್ಞಾನ ಸಂಪಾದಿಸಿ ವಾಗ್ಗೇಯಕಾರರಾಗಿ ತನ್ನನ್ನು ರೂಪಿಸಿಕೊಂಡಿದ್ದಾರೆ. ಇಂದಿನ ಪೀಳಿಗೆಗೆ ಇವರೊಂದು ಅಪರೂಪದ ನಿದರ್ಶನವಾಗಿದ್ದಾರೆ.

ಹಿಂದುಸ್ತಾನೀ ಶಾಸ್ತ್ರೀಯ ಸಂಗೀತದ ಚೌಕಟ್ಟಿನಲ್ಲಿ , ಶ್ರೀ ನಾರಾಯಣ ಪಂಡಿತರ ಆಳ, ಹರವು ಅಗಾಧವಾದದ್ದು. ಅವರ ರಚನೆಗಳಲ್ಲಿ ಅವರ ವ್ಯಕ್ತಿತ್ವದ ಆಳವನ್ನು ನೋಡಬಹುದು. ಅಷ್ಟೇ ಅಲ್ಲ, ಅವರ ಜೀವನಾನುಭವಗಳು, ವಿಚಾರಿಸುವ ಪದ್ಧತಿ, ಚಿಕ್ಕಂದಿನಿಂದಲೂ ಅವರ ಮೇಲಾದ ಸನಾತನ ಸಂಸ್ಕೃತಿಯ ಪ್ರಭಾವಗಳು, ಅವರಲ್ಲಿಯ ಸುಕೋಮಲ ಭಾವನೆಗಳು, ಮಾತೃವಾತ್ಸಲ್ಯಗಳು ತೆರೆದುಕೊಳ್ಳುತ್ತವೆ. ಅವರ ರಚನೆಗಳನ್ನು ಸಾಹಿತ್ಯದ ದೃಷ್ಟಿಕೋನದಲ್ಲಿ ಪರಾಮರ್ಶಿಸಿದಾಗ, ಈ ಮೇಲೆ ಹೇಳಿದ ಗುಣಗಳನ್ನು ಅದರಲ್ಲಿ ಕಾಣಬಹುದು. ಆದರೆ ಅದು ಬಂದಿಶ ರೂಪದಲ್ಲಿ ನಿಂತಾಗ, ತಂಬೂರಿಯ ಜೊತೆ ಹಾಡಿದಾಗ ಸ್ವರ-ಲಯದ ಭಾವಗಳಲ್ಲಿ ಅವು ಸಮೃದ್ಧವಾಗಿರುವುದನ್ನು ಕಾಣಬಹುದು. ಅವುಗಳಲ್ಲಿಯ ಭಾವ ತೀವ್ರತೆಯನ್ನು ನಾವೂ ಅನುಭವಿಸಬಹುದು. ಉತ್ತಮ ಚಾರಿತ್ರ್ಯಹೊಂದಿ, ತನ್ನ ಮನಸ್ಸನ್ನು ಲಗಾಮು ಹಾಕದೆ ಹರಿಬಿಟ್ಟಾಗಲೂ, ಯಾವನ ಮನಸ್ಸು ನಿಯಂತ್ರಿತವಾಗಿರುವುದೋ, ಅಂತಹ ವ್ಯಕ್ತಿಯಷ್ಟೇ ಒಳ್ಳೆಯ ಕಲಾವಿದನಾಗಬಲ್ಲ, ಉತ್ತಮ ವಾಗ್ಗೇಯಕಾರನಾಗಬಲ್ಲ ಎಂಬ ನಿದರ್ಶನಗಳು ನಮ್ಮಲ್ಲಿ ಸಾಕಷ್ಟಿವೆ. ತ್ಯಾಗರಾಜ, ಮುತ್ತುಸ್ವಾಮಿ ದೀಕ್ಷಿತ, ಶ್ಯಾಮಾಶಾಸ್ತ್ರಿ, ಶ್ರೀಕೃಷ್ಣ ನಾರಾಯಣ ರತಂಜನಕರ, ವಿಲಾಯತ ಹುಸೇನ ಖಾನ(ಆಗ್ರೆ ವಾಲೆ), ಕುಮಾರಗಂಧರ್ವ, ರಾಮಾಶ್ರಯ ಝಾ, ಸಿ.ಆರ್.ವ್ಯಾಸ, ಪುಟ್ಟರಾಜ ಗವಾಯಿ ಮೊದಲಾದವರು ಭಾರತದ ಸಂಗೀತಲೋಕಕ್ಕೆ ಉತ್ತಮ ವಾಗ್ಗೇಯಕಾರರಾಗಿ ಸಂದಿದ್ದಾರೆ. ಇಂಥವರ ಸಾಲಿಗೆ ಪ್ರಸ್ತುತ ದಿನಮಾನಗಳಲ್ಲಿ ಶ್ರೀ ನಾರಾಯಣ ಪಂಡಿತರನ್ನೂ ಸೇರಿಸಬಹುದೆಂಬುದು ನನ್ನ ಖಚಿತ ನಿಲುವು.

ಪಂಡಿತರ ಬಂದಿಶಗಳನ್ನು ಪರಿವೀಕ್ಷಿಸುವ ಪೂರ್ವದಲ್ಲಿ ವಾಗ್ಗೇಯಕಾರನೆಂದರೆ ಯಾರು? ಹಾಗೂ 'ಬಂದಿಶ' ಎಂದರೇನು? ಎಂಬುದನ್ನು ತಿಳಿಯಬೇಕಾದ ಅವಶ್ಯಕತೆಯಿದೆ. ನಾನಂದುಕೊಂಡಂತೆ ಶಬ್ದಾರ್ಥ ತಿಳಿದಿದ್ದ 'ವಾಕ್' ಇದ್ದು, ಗೇಯತೆಗೆ (ಸ್ವರ-ಲಯ-ಭಾವಗಳಲ್ಲಿ ಸಮೃದ್ಧವಾಗಿರುವುದು) ಯೋಗ್ಯವಾದ ರಚನೆಗಳನ್ನು ರಚಿಸಬಲ್ಲವ ವಾಗ್ಗೇಯಕಾರ ನಾಗುತ್ತಾನೆ. ಗೇಯತೆಗೆ ಯೋಗ್ಯ ಎಂದಾಗ ಸ್ವರಸಂವಾದ, ರಾಗಸ್ವರೂಪ, ಲಯಭಾವ, ತಾಳಗಳ ಪರಿಚಯ, ಇವೆಲ್ಲವುಗಳಲ್ಲಿರುವ ಒಳಸಂಬಂಧ ಚೆನ್ನಾಗಿ ತಿಳಿದಿರಬೇಕಾಗುತ್ತದೆ. ಸೃಜನಶೀಲತೆಯ ದೃಷ್ಟಿಯಿಂದ ಭಾವನೆ ವಿಕಾಸವಾಗಲು, ಸ್ವರ-ಲಯಗಳ ಪ್ರಯೋಗದಲ್ಲೇ ಯೋಗ್ಯ ವಾತಾವರಣ ನೀಡುವ ಜವಾಬ್ದಾರಿಯಿರುತ್ತದೆ. ಸ್ವರಕ್ಕೇ ಶರಣುಹೋಗುವ ಮಾನಸಿಕ ಪ್ರಬುದ್ಧತೆ ಬೇಕಾಗುತ್ತದೆ. ಸ್ವರದಲ್ಲೇ ಕರಗಬಹುದಾದ ಶಬ್ದಗಳು, ಅವುಗಳಿಂದಲೇ ರಚಿಸಬಹುದಾದ ಸಾಹಿತ್ಯದ ಪರಿಜ್ಞಾನವಿರ-ಬೇಕಾಗುತ್ತದೆ. ಇಷ್ಟೆಲ್ಲಾತಿಳಿದು, ಅವುಗಳ ಸಮಪಾಕ (ಯೋಗ್ಯ ರೀತಿಯ ಹದದಲ್ಲಿ ಒಟ್ಟು ಗೂಡಿಸುವುದು) ಮಾಡುವ ಸೂಕ್ಷ್ಮತೆ ಇರಬೇಕಾಗುತ್ತದೆ. ಇದೆಲ್ಲದರ ಜೊತೆ ಭಾವನೆಯ ವಿಸ್ತಾರಕ್ಕೆ, ಕಲ್ಪನಾ ಚಿತ್ರಗಳನ್ನು ಚಿತ್ರಿಸಲು, ಸ್ವರ-ಸಾಹಿತ್ಯ-ಲಯಗಳ ಉತ್ತಮ ನಿರೂಪಣೆಗೆ ಅವಕಾಶ ಕಲ್ಪಿಸುವ ರಚನೆಗಳನ್ನು ಸೃಷ್ಟಿಸಿದಾಗ ವಾಗ್ಗೇಯಕಾರ ಉತ್ತಮ ಗುಣಮಟ್ಟದ ರಚನೆಗಳನ್ನು ಸೃಷ್ಟಿಸಿದಂತಾಗುತ್ತದೆ. ಹಾಗೂ ಆತ ಉತ್ತಮ ವಾಗ್ಗೇಯಕಾರನಾಗುತ್ತಾನೆ. ವಾಗ್ಗೇಯಕಾರನಿಗಿದ್ದಷ್ಟೇ ಜವಾಬ್ದಾರಿ, ಇನ್ನೂ ಹೆಚ್ಚಿನ ಜವಾಬ್ದಾರಿ ಗಾಯಕನಿಗಿರುತ್ತದೆ ಎಂಬ ಅಂಶವನ್ನಿಲ್ಲಿ ಮರೆಯಲಾಗದು. ಏಕೆಂದರೆ ರಚನೆಯನ್ನು ಓದಿ, ತಿಳಿದು, ವಾಗ್ಗೇಯಕಾರನ ದೃಷ್ಟಿಕೋನದಿಂದ ನೋಡಿ ತನ್ನ ದೃಷ್ಟಿಕೋನದವರೆಗೂ ಪರಿಶೀಲಿಸಿ, ಸಭಿಕರೆದುರು ಪ್ರದರ್ಶಿಸುವ ಜವಾಬ್ದಾರಿ ಆತನದು; ಪಂ.ಕುಮಾರ ಗಂಧರ್ವರು ಹೇಳುವಂತೆ- 'ನಾನು ಹಾಡುತ್ತೇನೆಂದರೆ ನನ್ನನ್ನು ಸುಧಾರಿಸುತ್ತೇನೆ, ಶ್ರೋತೃಗಳನ್ನು ಸುಧಾರಿಸುತ್ತೇನೆ. ಶ್ರೋತೃಗಳು ಗಾಯಕನ ಜೊತೆ ಮಾನಸಿಕವಾಗಿ ಮೇಲೇರಲು ತಯಾರಿರುತ್ತಾರೆ. ಆದರೆ ಶ್ರೋತೃಗಳನ್ನು ರಂಜಿಸುವ ನೆಪದಲ್ಲಿ ಗಾಯಕ ಕೆಳಗಿಳಿಯಬಾರದೆಂದರೆ ಆತನಿಗೆ ಆತ್ಮ ಸಂಯಮವಿರಲೇಬೇಕು'. ಉತ್ತಮ ಬಂದಿಶನ ಸಹಾಯದಿಂದ ಮಾತ್ರ ಸಂಗೀತ ಪ್ರಸ್ತುತಿಯಲ್ಲಿ ಸಂಯಮ ಸಾಧ್ಯ. ಬಂದಿಶನ ಚೌಕಟ್ಟಿನಲ್ಲೇ, ಭಾವನಾತ್ಮಕವಾಗಿ ಆಳಕ್ಕಿಳಿಯುವ ಸಂಯಮ ಗಾಯಕನಿಗಿರಬೇಕು.

'ಬಂದಿಶ' ಇದು ಉರ್ದು ಶಬ್ದ. ಕೆಲವು ಸಾಹಿತ್ಯದ ತುಣುಕುಗಳನ್ನು ಅರ್ಥವತ್ತಾಗಿ ರಾಗ, ಲಯ, ತಾಳಗಳಲ್ಲಿ ಬಂಧಿಸುವುದಕ್ಕೆ ಬಂದಿಶ ಎಂದು ಹೆಸರು. ಇದನ್ನು ರಚನೆ ಎಂದೂ ಕರೆಯಬಹುದು. ರಾಗದ ವಿವಿಧ ಆಕಾರಗಳನ್ನು,

ರೂಪಗಳನ್ನು, ಭಾವಗಳನ್ನು ಹಿಡಿಯಲು ಬಂದಿಶ ಒಂದು ಮಾಧ್ಯಮ. ವಿಚಾರಿಸಿದಾಗ, ಬಂದಿಶ ಇರದಿದ್ದರೆ ರಾಗಕ್ಕೆ ರೂಪವೇ ಇಲ್ಲ; ಆಕಾರವೇ ಇಲ್ಲ. ಅದು ಬರಿಯ ಸ್ವರಗಳ ಗುಂಪಾಗಿರುತ್ತದೆ. ಗುಂಪಿನೊಳಗಿದ್ದ ಆಯಾ ಸ್ವರಗಳೊಳಗೊಂದು ಸಂವಾದವಿದ್ದರೆ, ಅದಕ್ಕೊಂದು ಅರ್ಥವಿರುತ್ತದೆ. ಅದರಲ್ಲೂ ಅಂತಹ ವಿಶಿಷ್ಟ ಗುಂಪುಗಳನ್ನು ಗುರುತಿಸಬಹುದು. ಉದಾಹರಣೆಗೆ; ನಿ॒,ಸಾಗ॒ರೆ॒ಸಾ ಇದು ಭೀಮಪಲಾಸೀಯ ಲಕ್ಷಣ ಹೇಳಿದರೆ, ನಿ॒ಸಾಗ॒,ಸಾ ಇದು ಧಾನೀಯನ್ನು ಸೂಚಿಸುತ್ತದೆ. ಧ.ನಿ.ರೆ॒ನಿ.ಧ., ಧ.ಸಾ ಇದು ಮಾರವಾದ ಮುಖ ಪರಿಚಯವಾದರೆ, ನಿ.ರೆ॒ನಿ.ಮ॑ ಇದು ಪುರಿಯಾದ ಲಕ್ಷಣವಾಗಿದೆ. ಹೀಗೇ ರೆಗಪಪಮ॑ಗ ಇದು ಶುದ್ಧ ಕಲ್ಯಾಣವನ್ನೂ, ಸಾ.ಧಮ॑ಧ ಇದು ತೋಡೀಯನ್ನೂ ಅಭಿವ್ಯಕ್ತಿಗೊಳಿಸುತ್ತದೆ. ಕಲ್ಯಾಣ, ಭೂಪ, ಕಾಫೀ ಮುಂತಾದರಾಗಗಳು, ಅನೇಕ ಸಂಗೀತಗಾರರ ಸ್ವರ-ಸಂಬಂಧಿ ವಿಚಾರಗಳಿಂದಾಗಿ, ರಾಗದ ಅದ್ಭುತ ವಾಕ್ಯ ರಚನೆಗಳಿಂದಾಗಿ ಸಮೃದ್ಧವಾಗಿ ಬೆಳೆದು ಪ್ರಬುದ್ಧರಾಗಗಳಾಗಿ ಮಾರ್ಪಟ್ಟಿವೆ. ಒಂದೇ ಸ್ವರಸಮೂಹಗಳ ಪ್ರಯೋಗ, ಆದರೆ ಸ್ವರಸ್ಥಾನಗಳು ಬೇರೆ ಬೇರೆಯಾದಾಗ, ಬೇರೆ ಬೇರೆ ರಾಗಗಳ ರಾಗ ವಾಚಕಗಳಾಗುತ್ತವೆ. ಉದಾಹರಣೆಗೆ, ಮ॑ರೆಗ ಇದು ಕಲ್ಯಾಣವನ್ನೂ, ಮ॑ರೆ॒ಗ॒ ಇದು ತೋಡಿಯನ್ನೂ, ಮ॑ರೆ॒ಗ ಇದು ಧನಾಶ್ರೀ ಯನ್ನೂ ತೋರಿಸುತ್ತದೆ. ಪ್ರತಿಯೊಂದು ರಾಗವೂ ಒಬ್ಬ ವ್ಯಕ್ತಿಯಂತೆ. ಅದಕ್ಕೆ ನಮ್ಮಂತೆ ಬಾಲ್ಯಾವಸ್ಥೆ , ಬೆಳವಣಿಗೆ ಎಲ್ಲಾ ಇವೆ. ಅದರದ್ದೇ ಆದ ವ್ಯಕ್ತಿತ್ವವಿದೆ. ಅದರ ವ್ಯಕ್ತಿತ್ವದಲ್ಲೂ ಬಹುಮುಖಗಳಿವೆ. ಇವೆಲ್ಲವುಗಳನ್ನು ಬಂದಿಶಗಳು ಅಭಿವ್ಯಕ್ತಿಗೊಳಿಸುತ್ತವೆ. ಬಂದಿಶಗಳನ್ನು ವಿವಿಧ ಕಟ್ಟಡಗಳಿಗೂ ಹೋಲಿಸಬಹುದು. ಒಂದು ಬಂದಿಶ ಸಾದಾ ಮನೆಯಂತಿರಬಹುದು, ಇನ್ನೊಂದು ತಾಜಮಹಲಿನಂತಿರಬಹುದು. ಅದರ ರಚನಾತ್ಮಕತೆ, ಅದರಲ್ಲಿ ಬಳಸಿಹೋಗುವ ವಿಶಿಷ್ಟ ಸ್ವರಗುಂಪುಗಳ ಮೇಲೆ, ಅವುಗಳ ವೈಚಿತ್ರ್ಯಗಳ ಮೇಲೆ ಆಧಾರಿತವಾಗಿದೆ. ಆಯಾ ರಚನಾತ್ಮಕ ಅಂಶಗಳನ್ನು ನೋಡಿ, ಸಾಹಿತ್ಯ-ಸ್ವರಭಾವಗಳ ದೃಷ್ಟಿಯಿಂದ ಅದರ ಯಾವ ಅಂಗಕ್ಕೆ ಮಹತ್ವ ನೀಡಬೇಕು (ಆಲಾಪ ಆಕಾರದಲ್ಲಿ, ಶಬ್ದಗಳಲ್ಲಿ; ಬೋಲತಾನು, ಸ್ವರಪ್ರಸ್ತಾರ, ಇತ್ಯಾದಿ) ಎಂಬುದನ್ನು ತಿಳಿದುಕೊಳ್ಳಬೇಕು. ಆಲಾಪನಂತರ ಬೋಲತಾನ, ಅದಾದನಂತರ ಸ್ವರಪ್ರಸ್ತಾರ, ನಂತರ ತಾನುಗಳು ಎಂದು ಯಾವುದೇ 'ಬಂದಿಶ' ಪ್ರಸ್ತುತಪಡಿಸುವಾಗಲೂ 'ನಿಗದಿತ ನಮೂನೆ' ಯಲ್ಲೇ ಹಾಡಿದರೆ ಕಲಾತ್ಮಕತೆಗೆ ಕುಂದುಂಟಾಗುತ್ತದೆ. ಕಲಿಯುವಾಗ ಇವುಗಳನ್ನೆಲ್ಲ ತಿಳಿಯುವುದು, ಅಭ್ಯಸಿಸುವುದು ಅಗತ್ಯವೇ ಆದರೂ, ಪ್ರದರ್ಶನಗೊಳ್ಳುವಾಗ ಬಂದಿಶನ ನಿರ್ಮಿತಿಯನ್ನು ನೋಡಿ ಅಲಂಕಾರ ಬಳಸಿಕೊಳ್ಳಬೇಕು. ಇಲ್ಲಿ ಸಂದರ್ಭಶುಚಿತ್ವ ಬೇಕು. ಹೀಗೇ ರಾಗಗಳ ಆಂತರಿಕ ಗುಣಗಳನ್ನು ತಿಳಿದುಕೊಳ್ಳಲು, ನಮ್ಮೊಳಗಿನ ಭಾವನೆಗಳನ್ನು ಹೊರಗೆಡವಲು, ಸಂಗೀತಾತ್ಮಕ ಅಂಶಗಳಿಂದ ರಚಿತವಾದ ರಚನೆಗಳೇ 'ಬಂದಿಶ'ಗಳು.

ಶ್ರೀ ನಾರಾಯಣ ಪಂಡಿತರ ಬಂದಿಶಗಳು 'ಅಭಿನವಭಾವ ಬಂದಿಶ' ಹೇಗಾಗುತ್ತವೆ? ಎಂಬುದನ್ನು ವಿಮರ್ಶಿಸುವ ಜವಾಬ್ದಾರಿ ಶಿಷ್ಯಳಾದ ನನ್ನದಾಗಿದೆ. ಬೊಂಬಾಯಿಯಿಂದ ಗೋಕರ್ಣಕ್ಕೆ ಬಂದ ಹೊಸದರಲ್ಲಿ, ಪಂಡಿತರು, ಶಿಷ್ಯೆಯೊಬ್ಬಳಿಗೆ ಪಾಠ ಮಾಡುತ್ತಿರುವಾಗ ಬರೆದ ಬಂದಿಶ 'ಮಾಯೀ ತೂ ಜಾನತ ಹೋ' ಎಂಬುದು, ಕಲ್ಯಾಣರಾಗದ್ದು. ಸಾಹಿತ್ಯವನ್ನು ಬಳಸಿ-ಕೊಂಡು ಬರೆದ ಅವರ ಮೊದಲ ಬಂದಿಶ ಇದು. ಸ್ವರ ಪ್ರತಿಮೆ ಹಾಗೂ ಲಯದ ವಿವಿಧ ಭಂಗಿಗಳ ಬಗೆಗೆ ಮೊದಲಿನಿಂದಲೂ ಒಲವಿದ್ದ ಪಂಡಿತರು ಆಗೊಂದು, ಈಗೊಂದು 'ತರಾನಾ' ರೂಪದ ಬಂದಿಶ ಕಟ್ಟಿದ್ದರು. ಆದರೆ ಸಾಹಿತ್ಯದ ಮೊದಲ ಬಳಕೆಯಾದದ್ದು ಈ ಬಂದಿಶನಲ್ಲಿ. ಇದಕ್ಕೆ ಅವರಿಗೆ ಸ್ಫೂರ್ತಿ ಎಂದರೆ ಕರ್ನಾಟಕಕ್ಕೆ ಅವರು ಕಾಲಿಟ್ಟಮೇಲೆ ಅವರಿಗೆ ಮೊದಲ ಶಿಷ್ಯಳಾಗಿ ದೊರೆತ ಶ್ರೀಮತಿ ಲಲಿತಾಹಿರೇಗಂಗೆ. ಇವರಲ್ಲಿದ್ದ ಕಂಠಮಾಧುರ್ಯ, ಸ್ವರದ ಮೇಲಿನ ಪ್ರೀತಿ, ಗುರುಭಕ್ತಿಯನ್ನೆಲ್ಲಾ ನೋಡಿ 'ತಾಯಿ, ನಿನಗೆ ನನ್ನ ಮನಸ್ಸು ತಿಳಿದಿದೆ, ನಿನ್ನ ದರ್ಶನವಿಲ್ಲದೆ ನನ್ನ ಜೀವ ಚಡಪಡಿಸಿದೆ; ನನ್ನ ಕಂಠದಲ್ಲಿ ಬೀನಿನ ಗುಣವಿರಲಿ,ಮಿಂಚಿನಂತಿರುವ ತಾನುಗಳುಲಿಯಲಿ, ಇದರ ಜೊತೆ ದಿನವೆಲ್ಲಾ ಚಿಂತನೆ ಮಾಡುವ ಗುಣವನ್ನೂ ಕರುಣಿಸು' ಎಂಬರ್ಥದ ಸಾಲುಗಳ ಬಂದಿಶ ಬರೆದರು. ಇದು ಸಂಗೀತ, ಲಲಿತಕಲೆಗಳಿಗೆ ಅಧಿದೇವತೆಯಾದ ಸರಸ್ವತಿಯಲ್ಲಿ ಸಂಗೀತದ ಉಪಾಸಕನಾಗಲು ಬೇಡಿದ ಜ್ಞಾನದ ದಿವ್ಯ ಭಿಕ್ಷೆ. ಇದು ಕೇವಲ ತೋರಿಕೆಯ ಭಕ್ತಿಯಲ್ಲ, ಶರಣಾಗತಿಯ ಆತ್ಮ ನಿವೇದನೆ.

ನಾನು ಸಂಗೀತಾಕಾಂಕ್ಷಿಯಾಗಿ ಮೊದಲು ಪಂಡಿತರ ಮುಂದೆ ಕುಳಿತಾಗ, ಅವರು ನನಗೆ ಹೇಳಿದ ಬಂದಿಶ ಅವರ ಮಾತೃವಾತ್ಸಲ್ಯವನ್ನು ಹೊರಗೆಡಹುವ ಭೂಪರಾಗದ ರಚನೆ. 'ನಜರಾನ ಲಾಗೆ ಏರಿ ದೈಂಯಾ ಮೇರೆ ಲಾಲನಕೊ' ಎಂಬ 'ನನ್ನ ಮಗುವಿನ ಮೇಲೆ ಯಾರ ದೃಷ್ಟಿಯೂ ಬೀಳದಿರಲಿ; ಮಣಿಮಯ ಕಿರೀಟ, ಕುಂಡಲ, ವೈಜಯಂತಿ ಹಾರಗಳನ್ನು ಹಾಕಿದ ನನ್ನ ಮುದ್ದು ಕಂದನ ಮೇಲೆ ಯಾರ ದೃಷ್ಟಿಯೂ ಬೀಳದಿರಲಿ' ಎಂಬ ಅರ್ಥ ಹೊಂದಿದೆ. ಅದರ ಜೊತೆ ಅವರು ನೀಡಿದ ರಾಗದ ವಿವರಣೆ, ಅದರ ಮುಖ್ಯ ರಸ್ತೆ ಹಾಗೂ ಒಳ ದಾರಿಗಳ ಬಗೆಗಿನ ವಿಚಾರಗಳು ನನಗೆ ಅದೆಷ್ಟು ಹಿಡಿಸಿತ್ತೆಂದರೆ ಎಷ್ಟೋ ದಿನಗಳು ಆ ಗುಂಗಿನಲ್ಲೇ ನಾನಿದ್ದೆ.

ಪಂಡಿತರು ಯಾವಾಗಲೂ ಹೇಳುವುದು ಹಾಡುವಾಗ ಧ್ವನಿಯಲ್ಲಿಯೂ 'ಜೀರ್' ಇರಬೇಕು ಎಂದು. ಅವರ ಪ್ರಕಾರ ಜೀರ್ ಎಂದರೆ ಕಂಠದಲ್ಲಿಯ ಕಂಪನದಲ್ಲಿ ಜೀವವಿರಬೇಕು. ನಾವು ತಂಬೂರಿಯನ್ನು ಶೃತಿಗೂಡಿಸಿದಾಗ, ತಂಬೂರಿಯ ಕುದುರೆ(ಘೋಡಾ)ಯ ಮೇಲಿನ ದಾರವನ್ನು ಸರಿಯಾಗಿ ಹೊಂದಿಸಿ ಅಳವಡಿಸಿದಾಗ ತಂಬೂರಿಯ ಶೃತಿಯಲ್ಲಿ ಝೇಂಕಾರವಿರುತ್ತದೆ. ಇಲ್ಲವಾದರೆ ತಂತಿಯ ಲೋಹದ ಶಬ್ದದಿಂದ ತಂಬೂರಿ ನಿರ್ಜೀವ ಹೊಂದುತ್ತದೆ. ಹೀಗೆಯೇ ತಂಬೂರಿಯ ಶೃತಿಗೊಂದು ಜೀವ ನೀಡುವುದೇ ಜೀರ್. ಹಾಗೆಯೇ ನಾವು ಸ್ವರ ಹಚ್ಚಿದಾಗ (ಈ ಪ್ರಯೋಗ ತಪ್ಪು, ಸ್ವರವನ್ನು ಎಲ್ಲಿ ಹಚ್ಚುವುದು?), ಅಲ್ಲ ಸ್ವರ ತೆಗೆದಾಗ (ಸ್ವರವು ನಮ್ಮಲ್ಲೇ ಇದೆ, ಅದನ್ನು ಹೊರಗೆ ತೆಗೆಯುವುದು) ಜೀರ್ ಇರಬೇಕು. ಇದು ನಿಃಸ್ಸಂಶಯವಾಗಿ ನಮ್ಮ ಮನಸ್ಸಿನ ಪರಿಸ್ಥಿತಿಯ ಮೇಲಡಗಿದೆ ಎಂಬ ಅಂಶ ಇತ್ತೀಚೆಗೆ ನನಗೆ ತಿಳಿಯತೊಡಗಿದೆ. ತಂಬೂರಿಯ ಜೊತೆ ಜೀರ್ ನ್ನೊಳಗೊಂಡ ನಮ್ಮ ಸ್ವರ ಹೊರಬಂದಾಗ ಸ್ವರಗಳು ಸ್ವಚ್ಛ ನೀರಿನಂತೆ ಹರಿಯುತ್ತವೆ. ಆಗ ನಮ್ಮ ಹಾಡಿಗೊಂದು ಜೀವ ಬರುತ್ತದೆ. 'ಜೀವ'ಕ್ಕೆ ಸ್ಫೂರ್ತಿ ಬೇಕು. ಸ್ಫೂರ್ತಿಗೆ ಮನಸ್ಸು ಆನಂದದಲ್ಲಿರಬೇಕು. ಆನಂದದಲ್ಲಿರಬೇಕಾದರೆ ಆ ಮನಸ್ಸು ಹೊರ ಜಗತ್ತಿನ ಅದೆಷ್ಟು ಕೊಳೆಗಳನ್ನು ಮೆತ್ತಿಕೊಂಡಿದ್ದರೂ ಹಾಡುವಾಗ ಅವುಗಳನ್ನೆಲ್ಲಾ ತೊಳೆದುಕೊಂಡು ಶುಭ್ರವಾಗಿರಬೇಕು.

ಪಂಡಿತರಲ್ಲಿಗೆ ಕಲಿಯಲೆಂದು ಬಂದಾಗ, ನಾನು ಗಂಧರ್ವಮಹಾಮಂಡಲ ನಡೆಸುವ ಸಂಗೀತಾಲಂಕಾರ ಪರೀಕ್ಷೆ ತೆಗೆದುಕೊಂಡಿದ್ದೆ. ಪಂಡಿತರ ಮಾತಿನ ಧಾಟಿಯಲ್ಲಿ ಸಂಗೀತ ಪರೀಕ್ಷೆಗಳನ್ನು ಮಾಡಿಕೊಳ್ಳುವ ಉದ್ದೇಶದ ಬಗೆಗೆ ಮಹಾ ಅಲರ್ಜಿ ಇರುವಂತೆ ನನಗನ್ನಿಸಿತ್ತು. ಹೀಗಾಗಿ ಈ ವಿಷಯ ಅವರಲ್ಲಿ ಹೇಳಿದರೆ ಅವರು ನನಗೆ ಸಂಗೀತದಲ್ಲಿ ಮಾರ್ಗದರ್ಶನ ನೀಡುವುದನ್ನೇ ನಿಲ್ಲಿಸಿಬಿಟ್ಟರೆ ಎಂಬ ಆತಂಕ ಉಂಟಾಗಿತ್ತು. ಶಾಪಗ್ರಸ್ತ ಕರ್ಣನು ಕಲಿತ ವಿದ್ಯೆಯಂತಾದರೆ? ಎಂದು ಕಳವಳ ಕ್ಕೊಳಗಾದೆ. ಮತ್ತೆ ಧೈರ್ಯಮಾಡಿ ಸಂಗೀತಾಲಂಕಾರ ಪರೀಕ್ಷೆಗೆ ಕುಳಿತಿರುವ ವಿಷಯ ತಿಳಿಸಿದೆ. ಈ ವಿಷಯವನ್ನರುಹಿದಾಗ ಪಂಡಿತರ ಪ್ರತಿಕ್ರಿಯೆ ನಾನು ಕಲ್ಪಿಸಿದ್ದಕ್ಕೆ ವಿರುದ್ಧವಾಗಿತ್ತು. "ನಿನ್ನಂತಹ ವಿದ್ಯಾರ್ಥಿಗಳು ಪರೀಕ್ಷೆ ಮಾಡಿಕೊಳ್ಳುವುದರ ಬಗ್ಗೆ ನನ್ನ ಅಭ್ಯಂತರವಿಲ್ಲ. ಆದರೆ ಏನೂ ತಿಳಿಯದೆ ಪರೀಕ್ಷೆ ಮುಗಿಸಿಕೊಂಡು, ಅದೇ ದೊಡ್ಡ ಸಾಧನೆ ಎಂದುಕೊಳ್ಳುವವರ ಬಗ್ಗೆ ಪರಿತಾಪವಿದೆ" ಎಂದರು. ಮುಂದೆ ಪರೀಕ್ಷೆಯ ಪಠ್ಯಕ್ರಮದಲ್ಲಿರುವ ಅದೆಷ್ಟೋ ಅಪ್ರಚಲಿತ ರಾಗಗಳಲ್ಲಿ ಬಂದಿಶಗಳನ್ನು ರಚಿಸಿ ಆ ರಾಗಗಳನ್ನು ನನಗೆ ಪರಿಚಯಿಸಿದರು. ಇದೇ ಸಮಯದಲ್ಲಿ ಅವರು ಶ್ಯಾಮ ಕಲ್ಯಾಣದಲ್ಲಿಯ 'ಥಕೇ ನೈನ ಹಮಾರೆ' ಹಾಗೂ 'ಮನಹರಲೀನೋ' ಎಂಬ ಬಂದಿಶಗಳನ್ನು ಕಲಿಸಿದರು. ಶ್ಯಾಮ ಕಲ್ಯಾಣದ ರೂಪ ರೇಷೆಗಳು, ಶ್ಯಾಮ ಕಲ್ಯಾಣದ ಇನ್ನೊಂದು ರೂಪವೇನು? ಭಾವನಾತ್ಮಕವಾಗಿ ಅದು ಶುದ್ಧ ಸಾರಂಗದಿಂದ ಅದೆಷ್ಟು ಭಿನ್ನ? ಈ ಭಾವನಾತ್ಮಕ ಭಿನ್ನತೆಗೆ ಯಾವ ಸ್ವರಗಳು ಪ್ರಮುಖ ಪಾತ್ರ ವಹಿಸುತ್ತವೆ? ಎಂಬುದರ ಬಗೆಗೆ ಮಾಹಿತಿ ನೀಡಿದರು. ಹೆಚ್ಚು ಕಮ್ಮಿ ಒಂದೇ ರೀತಿಯ ಸ್ವರಗಳು ಬರುವ ಈ ರಾಗಗಳಲ್ಲಿ ಸ್ವರಗಳ ಮುಖೇನವೇ ಒಳ ಹೋಗುತ್ತಿದ್ದ ನನಗೆ ಭಾವನೆಯ ಮುಖೇನವೂ ಭೇದ ಕಾಣಬಹುದು ಎಂಬ ಹೊಸ ವಿಚಾರ 'ಸಂಗೀತದಲ್ಲಿಯ ಭಾವಸೌಂದರ್ಯದ' ಜೀವತುಂಬಿದ ಹೊಸ ಜಗತ್ತಿನ ಹೊಸಲು (ತಲೆ ಬಾಗಿಲು) ತೆರೆದಿತ್ತು.

ಒಂದು ದಿನ 'ಝಿಂಝೋಟೀ'ಯ ಪಾಠ ನಡೆದಿತ್ತು. ಅದರ ನಡೆ, ಅದರಲ್ಲಿರುವ ಆರ್ದ್ರತೆ ನನ್ನ ಜೀವ ಹಿಂಡಿತ್ತು. 'ಸಖೀ ಹಮರೀ ಮೀತ, ಸುರಕೀ ಯುಗ ಯುಗಸೇ ತುಮ ಹಮ ಜೋಗಿ ಸುರಕೀ ಮಹಿಮಾ ಗಾವೆ' ಎಂಬ ಬಂದಿಶನ ಸ್ಥಾಯಿ 'ಸಖೀ, ಈ ನಮ್ಮ ಭೇಟಿ ಸ್ವರದಿಂದ ಆಗಿದ್ದು, ಯುಗ ಯುಗದಿಂದಲೂ ನಾನು ನೀನು ಯೋಗಿಗಳು, ಸ್ವರ ಮಹಿಮೆಯನ್ನು ಹಾಡುತ್ತಿದ್ದವರು' ಎಂಬರ್ಥ ಹೊಂದಿದ್ದು, ನಮ್ಮ ವೇದಗಳಲ್ಲಿ ಬರುವ ಗುರು ಶಿಷ್ಯರ ಭೇಟಿಯ ಚಿತ್ರಗಳನ್ನು ತೆರೆದಿಡುತ್ತದೆ. ಇದರ ಅಂತರಾದಲ್ಲಿ 'ದಿನ ಢಲೆ ತೂ ಅಬ ಆಯೀ ಹೋ' ಎಂಬ ಸಾಲುಗಳು 'ನನ್ನ ಜೀವನ ಸಂಧ್ಯೆಯಲ್ಲಿ ನೀನು ಬಂದೆ. ಈ ನಾದಪಿಯಾನಿಗಿರುವ ಹೆದರಿಕೆಯೆಂದರೆ ನೀನಿಲ್ಲದೆ ಸ್ವರದ ಮಹಿಮೆಯನ್ನು ಹೇಗೆ ಹಾಡುವುದು?' ಎಂಬ ಅರ್ಥ ಬರುತ್ತದೆ. ಇಲ್ಲಿ ಗುರುಶಿಷ್ಯರಿಬ್ಬರೂ ಜ್ಞಾನದ ದಾರಿಯಲ್ಲಿ ಕೂಡಿ ಪ್ರಯಾಣಿಸುವ ಪಯಣಿಗರು. ಗುರುವಿಗೆ ಇಳಿಯುವ ನಿಲ್ದಾಣ ಹತ್ತಿರ ಬರುತ್ತಿದೆ, ತನ್ನಲ್ಲಿದ್ದ ಜ್ಞಾನದ ಗಂಟುಮೂಟೆಗಳನ್ನು ಶಿಷ್ಯನ ಕೈಲಿಡಬೇಕಾದ ಜವಾಬ್ದಾರಿಯಿದೆ. ಆದರೆ ಅವುಗಳನ್ನು ತೆಗೆದುಕೊಳ್ಳುವ ಯೋಗ್ಯತೆಯಿರುವ ಶಿಷ್ಯ ಈಗಷ್ಟೇ ಸಿಕ್ಕಿದ್ದಾನೆ. ತಾನು ಸಾಧಿಸಿದ ಜ್ಞಾನವನ್ನು, ಅದನ್ನು ಸಾಧಿಸುವ ಬಗೆಯನ್ನು ಅವನಿಗೆ ಹೇಳಲಾಗುವುದೇ? ಎಂಬ ಆತಂಕ ಗುರುವಿನದು. ಈ ಎಲ್ಲ ವಿಚಾರಗಳು ಈ ಬಂದಿಶನಲ್ಲಡಗಿದೆ.

ಇದೇ ರಾಗದ ಇನ್ನೊಂದು ಬಂದಿಶ 'ರೇಶಮ ಕಿ ಡೋರ ಸುರಕೀ, ಸುರಂಗ ರಂಗಕೀ ಮನ ಕೋ ಲುಭಾನಿ; ಚಲತ ರಹೂಂ ಸಂಗ ಸಾಧಕ ಮೈ ಸುರಕೀ, ಖೋಜತ ಸುರ ರಾಹ ಮ್ಯೆಂ ಭೂಲಿ, ಬಂಧನ ಯೇ ಕೈಸಾ ಖೀಂಚ ಲೇ ಆಯಿ' ಎಂಬುದು. ನನ್ನ ಸಂಗೀತ ಕಲಿಕೆಗೊಂದು ತಿರುವು ನೀಡಿದ ಬಂದಿಶ ಇದು. ಸ್ಥಾಯಿಯ ಸಾಲುಗಳಲ್ಲಿ 'ರೇಶಿಮೆಯ ದಾರದಂತೆ ಇರುವ ಸ್ವರ ಒಳ್ಳೊಳ್ಳೆ ಬಣ್ಣಗಳಿಂದ ಕೂಡಿದ್ದು, ನನ್ನ ಮನಸ್ಸನ್ನು ಸೂರೆಗೊಂಡಿದೆ' ಎಂಬ ಅರ್ಥವಿದೆ. ಸ್ವರವನ್ನು ರೇಶಿಮೆಯ ದಾರಕ್ಕೆ ಹೋಲಿಸಿದ್ದು ಸುಂದರ ಉಪಮೆಯಾಗಿದೆ. ಏಕೆಂದರೆ ರೇಶಿಮೆದಾರ ಸುಕೋಮಲ ಆದರೆ ಬಹಳ ಗಟ್ಟಿ, ಬಾಳಿಕೆ ಬರುವಂಥಾದ್ದು. ಕುಮಾರ ಗಂಧರ್ವರು ಆಗಾಗ ಹೇಳುತ್ತಿದ್ದ 'ಸ್ವರ ಕಂಬದಂತೆ ನಿಲ್ಲಬೇಕು, ಹೂವಿನಂತೆ ಬೀಳಬೇಕು' ಎಂಬ ಮಾತಿನ ಪ್ರತಿಬಿಂಬವನ್ನು ಮೇಲಿನ ಉಪಮೆಯಲ್ಲಿ ಕಾಣಬಹುದು. ಪಂ.ಕುಮಾರ ಗಂಧರ್ವರು ತನ್ನ ನಿರ್ಗುಣೀ ಭಜನೆಗಳ ಪ್ರಯೋಗದಲ್ಲಿ ಸ್ವರವನ್ನು ಕಂಬದಂತೆ ನಿಲ್ಲಿಸಿ, ಠುಮ್ರಿಗಳಲ್ಲಿ ಅವುಗಳನ್ನು ಹೂವಿನಂತೆ ಉದುರಿಸುವ ಪ್ರಯತ್ನ ಮಾಡಿ, ಖ್ಯಾಲಿನ ಪ್ರಯೋಗದಲ್ಲಿ ಭಾವಕ್ಕೆ, ಉತ್ಸ್ಫೂರ್ತಿಗೆ ಬೇಕಾದಂತೆ ಇವುಗಳ ಪ್ರಯೋಗಗಳನ್ನೇ ಬಳಸಿ ಸಂಗೀತಲೋಕದ ಗಂಧರ್ವರ ಸಾಲಿಗೇ ಸೇರಿದರು. ತನ್ನ ಗುರುವಿನ ದೊಡ್ಡ ಚಿತ್ರವನ್ನು ಪುಟ್ಟ ಕ್ಯಾಮೆರಾದಲ್ಲಿ ಹಿಡಿದಿಟ್ಟಂತೆ ಪಂಡಿತರು ಸ್ವರವನ್ನು ರೇಶಿಮೆಯ ದಾರಕ್ಕೆ ಹೋಲಿಸಿದ್ದಾರೆ. ಇದರ "ಸುರಂಗ ರಂಗಕೀ' ಎಂಬ ಪ್ರಯೋಗದಲ್ಲಿ ಸುಂದರ ಶಬ್ದ ಚಿತ್ರಣವಿದೆ, drama ಇದೆ. ಶಬ್ದದಲ್ಲಿ ಹೇಳಲಾಗದು, ಹಾಡುವಾಗ ಪ್ರಯೋಗಿಸಿ ತೋರಿಸಬೇಕಷ್ಟೆ. ಮುಂದೆ ಅಂತರಾದಲ್ಲಿ 'ನಾನು ಸ್ವರದ ಸಾಧಕನಾಗಿದ್ದು ಅದರ ಹುಡುಕಾಟದಲ್ಲಿ ದಾರಿತಪ್ಪಿ ಎಲ್ಲೆಲ್ಲೋ ಹೋಗಿದ್ದೆ. ಆದರೆ ಶುಚಿತ್ವದಿಂದ ಕೂಡಿದ ಅದೇ ಸ್ವರದ ಬಂಧನ ಹೇಗಿದೆ ಎಂದರೆ ಯೋಗ್ಯರಲ್ಲಿ ಅದು ನನ್ನನ್ನು ಎಳೆದು ತಂದಿದೆ' ಎಂಬುದು. ಯೋಗ್ಯ ಶಿಷ್ಯನಿಗೆ ಸದ್ಗುರುವಿನ ಸಾನ್ನಿಧ್ಯ ದೊರೆಯಿತು ಎಂಬರ್ಥ ಇದರಲ್ಲಡಗಿದೆ.

ಎಪ್ರಿಲ್, ೨೦೦೬ರಲ್ಲಿ ಉಡುಪಿಯ 'ರಾಗಧನ'ದಲ್ಲಿ ಪಂಡಿತರು ಹಿಂದುಸ್ತಾನೀ ಸಂಗೀತದ ಮೇಲೆ 'ಸ್ಥೂಲದಿಂದ ಸೂಕ್ಷ್ಮದ ಕಡೆಗೆ ವಿಕಸಿಸಿದ ಹಿಂದುಸ್ತಾನೀ ಸಂಗೀತ' ಹಾಗೂ 'ಕಾಲಕ್ಕೆ ಬದಲಾದ ಹಿಂದುಸ್ತಾನೀ ರಾಗರೂಪಗಳು' ಎಂಬ ವಿಷಯಗಳ ಮೇಲೆ ಉಪನ್ಯಾಸಗಳನ್ನು ಬಂದಿಶಗಳ ಆಧಾರ ಸಹಿತ ನೀಡಿದರು. ಮೊದಲನೆಯ ಉಪನ್ಯಾಸವು, ಹಿಂದುಸ್ತಾನೀ ಶೈಲಿಯ ಹಳೆಯ ಗಾಯನ ಪದ್ಧತಿಯಾದ ಧೃಪದ, ಮೂಲದಲ್ಲಿ ಹೇಗೆ ಹಾಡಲ್ಪಡುತ್ತಿತ್ತು, ಖ್ಯಾಲ ಗಾಯನ ಪದ್ಧತಿಯು ಪ್ರಚಾರಕ್ಕೆ ಬರುವ ಮೊದಲು ಹೇಗೆ ಹಾಡಲ್ಪಟ್ಟಿತು ಎಂಬ ವಿಷಯದಿಂದ ಪ್ರಾರಂಭಗೊಂಡಿತ್ತು. ಮುಂದೆ ಖ್ಯಾಲ, ಠುಮ್ರಿ, ಟಪ್ಪಾ, ಘಜಲ ಶೈಲಿಗಳ ಮುಖೇನ, ಜನಪ್ರಿಯವಾಗುವ ಸ್ವರ-ಲಯ ಭಾವಗಳು ಸ್ಥೂಲದಿಂದ ಸೂಕ್ಷ್ಮಕ್ಕೆ ಪ್ರಯಾಣಿಸುವವು ಎಂಬುದನ್ನು ವಿವರಿಸಿದರು. ತಮ್ಮ ಎರಡನೆಯ ಉಪನ್ಯಾಸದಲ್ಲಿ ರಾಗ ಕಲ್ಯಾಣ, ಮೂಲದಿಂದ ಇಲ್ಲಿಯವರೆಗೆ ಬದಲಾಗುತ್ತ

ಬಂದ ರೀತಿಯನ್ನು ಬಂದಿಶಗಳ ಮೂಲಕ ವಿಸ್ತಾರವಾಗಿ ವಿವರಿಸಿದರು. ಬಿಹಾಗ ಹಾಗೂ ಭೀಮಪಲಾಸ ರಾಗಗಳ ವಿಕಸನದ ಬಗ್ಗೆ ಸಂಕ್ಷಿಪ್ತ ವಿವರಣೆ ನೀಡಿದರು. ಅವರ ಈ ಉಪನ್ಯಾಸಗಳು ಸಂಗೀತಗಾರರಿಗೆ ಹಾಗೂ ಶ್ರೋತೃಗಳಿಗೆ ವೈಚಾರಿಕ ಹಾಗೂ ಪ್ರಾಯೋಗಿಕ ದೃಷ್ಟಿಯಿಂದ ಪ್ರಶಿಕ್ಷಿತವೂ ಚಿಂತನೀಯವೂ ಆಗಿದ್ದವು.

ಈ ಸಮಯದಲ್ಲಿ ಅದೇ ಸಂಗೀತ ಸಂಸ್ಥೆಯಲ್ಲಿ ಸ್ವತಂತ್ರವಾಗಿ ಸಂಗೀತ ಕಾರ್ಯಕ್ರಮ ನೀಡುವ ಸದವಕಾಶ ನನಗೆ ದೊರೆತಿತ್ತು. ಅಂದು ನಾನು ರಾಗ ಝಿಂಝೋಟೀಯಲ್ಲಿ ಪಂಡಿತರ ಈ ಮೇಲೆ ಹೇಳಿದ ಬಂದಿಶಗಳನ್ನು ಹಾಡಿದ್ದೆ. ಯಾವುದೇ 'ಆ'ಕಾರದ ಆಲಾಪ, ಪ್ರಚಲಿತ ಬೋಲತಾನ, ತಾನುಗಳ ಪ್ರಯೋಗ ಮಾಡದೇ ಬಂದಿಶನ ಸಾಹಿತ್ಯ ಭಾವವನ್ನೇ ಗಮನದಲ್ಲಿಟ್ಟುಕೊಂಡು ರಾಗ ನಿರೂಪಣೆಯ ಪ್ರಯತ್ನ ಮಾಡಿದ್ದೆ. ಅಷ್ಟೇ ಅಲ್ಲ, ಸ್ವರದ ಆಳವನ್ನು ಅನುಭವಿಸಬೇಕೆಂದರೆ ಹಾರ್ಮೋನಿಯಮ್ ಸಾಥ ಇಲ್ಲದೆ ಬರಿಯ ತಂಬೂರಿಗಳ ಶೃತಿಯ ಮೇಲೇ ಹಾಡಬೇಕೆಂಬ ವಿಚಾರದ ಪ್ರಯೋಗವನ್ನು ಶಾಸ್ತ್ರೀಯ ಸಂಗೀತದ ನನ್ನ ಕಚೇರಿಯಲ್ಲಿ ಮೊದಲಬಾರಿಗೆ ಪ್ರಯೋಗ ಮಾಡಿದ್ದೆ. ಅಂದು ಸಭಿಕರಿಂದ ನನಗೆ ಸಿಕ್ಕ ಪ್ರತಿಕ್ರಿಯೆ ಮನನೀಯ. ಸಂಗೀತಾರಾಧಕರು, ಸಂಗೀತವಿಮರ್ಶಕರು, 'ರಾಗಧನ'ಸಂಗೀತ ಸಂಸ್ಥೆಯ ಸಂಸ್ಥಾಪಕರಲ್ಲೊಬ್ಬರು ಹಾಗೂ ಅದರ ಕಾರ್ಯದರ್ಶಿಗಳೂ ಆಗಿದ್ದ -ನಾನು ವಿದ್ಯಾರ್ಥಿ ಆಗಿರುವಾಗಿನಿಂದಲೂ ನನ್ನ ಸರ್ವತೋಮುಖ ಬೆಳವಣಿಗೆಗೆ ಪ್ರೋತ್ಸಾಹ ನೀಡುವಲ್ಲಿ ಪ್ರಮುಖರೂ ಆಗಿದ್ದ -ಶ್ರೀ ಅರವಿಂದ ಹೆಬ್ಬಾರರು-"ಮಗು, ಪಂಡಿತರ ಇಂತಹ ಒಳ್ಳೆಯ ಬಂದಿಶಗಳನ್ನು ಜನರೆದುರಿಗಿಡುವ ಸತ್ಕಾರ್ಯ ನಿನ್ನಿಂದಲೇ ಆಗಬೇಕಷ್ಟೆ " ಎಂದು ಭಾವುಕರಾಗಿ ನನ್ನ ಮುಂದಿನ ಜವಾಬ್ದಾರಿಯ ಬಗ್ಗೆ ಉಸುರಿ, ಆಶೀರ್ವದಿಸಿದ್ದರು. ಇದೇ ಸಂಗೀತ ಕಚೇರಿಯಲ್ಲಿ ನಾನು ನಂದರಾಗವನ್ನು ಕೂಡ ಪ್ರಸ್ತುತಪಡಿಸಿದ್ದೆ. ಸಂಗೀತದಲ್ಲಿ ರಾಗಗಳನ್ನು ಆಲಿಸುವಲ್ಲಿ ಒಳ್ಳೆಯ ಕಿವಿಗಳನ್ನು ಹೊಂದಿದ್ದ, ತನಗೆ ಕಂಡದ್ದನ್ನು ನಿರ್ಭಿಡೆಯಿಂದ ಹೇಳುವ ಅದೇ ಅರವಿಂದ ಹೆಬ್ಬಾರರು- "ಈ ರಾಗದಲ್ಲಿ, ವಾಕ್ಯಗಳ ರಚನೆಯಲ್ಲಿ ಪುನರಾವೃತ್ತಿ ಬಹಳವಾಯಿತು" ಎಂದರು. ಇದನ್ನು ಕೇಳಿ 'ವಿಲಂಬಿತ ಲಯದಲ್ಲಿ ಇರುವಾಗಿನ ಸ್ವರಪ್ರತಿಮೆ ದೃತಗತಿಯಲ್ಲಿ ಇರುವುದಿಲ್ಲ, ಇದರ ಭಿನ್ನತೆ ಶಾರದಾಳಿಗೆ ತಿಳಿದಿಲ್ಲ' ಎಂದುಕೊಂಡ ಪಂಡಿತರು ನನಗೆ ಈ ತಥ್ಯ ತಿಳಿಸಲು ರಾಗ ನಂದದಲ್ಲಿ 'ಯೇ ಜೋ ರೂಪ ಬನೆ ಕೈಸೆ' ಹಾಗೂ 'ಜಾರೇ ಜಾರೇ ಜಾ ಬದರುವಾ' ಎಂಬ ರಚನೆಗಳನ್ನು ಕೇವಲ ಕೆಲವು ದಿನಗಳಲ್ಲೇ ರಚಿಸಿ ಕಲಿಸಿದರು. ಈ ಬಂದಿಶಗಳನ್ನು, ಈ ರಾಗದಲ್ಲಿ ತಲಾಂತರದಿಂದ ನಡೆದು ಬಂದ ಯಾಂತ್ರಿಕ ಪ್ರಯೋಗ 'ಗಮಪಧನಿ, ಪಧ, ಮ'ಪ, ಗಮಧಪರೆಸಾ' ವನ್ನು ಬಳಸದೆಯೇ ರಚಿಸಿದ್ದಾರೆ. ಯಾಂತ್ರಿಕ ಪ್ರಯೋಗಗಳಿಲ್ಲದೆಯೂ ರಾಗ ತನ್ನ ನೈಜ ಸ್ವರೂಪವನ್ನು ಹಾಗೂ ಸೌಂದರ್ಯವನ್ನೂ ಕಾದುಕೊಳ್ಳುತ್ತದೆ ಎಂಬ ಅಂಶವಿಲ್ಲಿ ಪ್ರತಿಪಾದಿತವಾಗುತ್ತದೆ.

ಕೆಲವು ಅಪ್ರಚಲಿತ ರಾಗಗಳಾದ ಗೌರೀ(ಕಾಲಿಂಗಡಾ ಅಂಗ), ಗೌರೀ(ಪೂರ್ವೀ ಅಂಗ), ಗಾಂಧಾರೀ, ದೇವಗಾಂಧಾರ, ಮಾಲಗುಂಜೀ, ದೇವಗಿರಿ ಬಿಲಾವಲ ಮುಂತಾದ ರಾಗಗಳು ಲುಪ್ತವೇ ಆದಂತಿವೆ. ಇವುಗಳಲ್ಲಿ ರಚಿತವಾದ ಪಂಡಿತರ ಬಂದಿಶಗಳು ಬಹಳ ಅಪರೂಪದವು. ಗೌರೀ(ಕಾಲಿಂಗಡಾ ಅಂಗ)ಯನ್ನು ಪ್ರತಿಪಾದಿಸುವ 'ಭೋರಹೀ ಕೌನ ಬಜಾವೆ ಬಾಂಸುರಿಯಾ' ಎಂಬ ಬಂದಿಶನಲ್ಲಿ ಶಬ್ದ ಚಿತ್ರಣದ ಸ್ಪಷ್ಟತೆಯಿದೆ. ಈ ಮುಂಜಾವಿನ ಸಮಯದಲ್ಲಿ ಯಾರು ಬಾಂಸುರಿ ನುಡಿಸುತ್ತಿರುವುದು. 'ದೂರದಿಂದ ಕೇಳಿಬರುತ್ತಿರುವ ಮಧುರ ನಾದ' ಎಂಬಾಗಿನ ಪ್ರಯೋಗದಲ್ಲಿ 'ದೂರ' ಎಂಬ ಶಬ್ದವನ್ನು ಸ್ವರಾಂತರ್ಗತವಾಗಿ ಇಡುವ ರೀತಿ ಶಾಬ್ದಿಕ ಅರ್ಥವನ್ನು ಪುಷ್ಟೀಕರಿಸುತ್ತದೆ. ಮಾಲಗುಂಜೀಯ 'ರುಣುಕ ಝುಣುಕ ಬಾಜೆ'ಯಲ್ಲಿ ಮಗುವಿನ ಗೆಜ್ಜೆಯನಾದವೇ ತುಂಬಿಕೊಂಡಂತಿದೆ. ಧಾನೀಯ 'ಮೋಹನ ಮಧು ಬನ ಮೇ'ಯಲ್ಲಿ ಜೋಕಾಲಿ (ಝೂಲಾ)ಯ ಜೀಕುವಿಕೆಯ ಚಿತ್ರಣವಿದೆ. ಕನಸು ಕಾಣುವಾಗ ಚಿತ್ರ ಕಣ್ಮುಂದೆ ಬರುವ ಹಾಗೆ ಶಬ್ದ ಚಿತ್ರಗಳನ್ನು ಆಯಾ ಚಿತ್ರಣಕ್ಕೆ ಬೇಕಾದ ಸ್ವರ-ಲಯಗಳ ಪ್ರಯೋಗದಿಂದ ಮಾಡಬೇಕಷ್ಟೆ.

ತಾಳದೊಳಗೂ ಲಾಲಿತ್ಯವಿದೆ, ಜೀವದ ಸೆಲೆಯಡಗಿದೆ ಎಂಬ ವಿಚಾರವನ್ನು ಅನುಮೋದಿಸಲು ಲಲಿತದ 'ತುಮ ಶಿವರೂಪ', ಜೋಗಕಂಸದ 'ನಿರಂಜನ ನಿರಾಕಾರ' ಎಂಬ ಬಂದಿಶಗಳು ರಚಿತವಾಗಿವೆ. ತಾನುಗಳ ಅಭ್ಯಾಸಕ್ಕೆಂದೇ ರಚಿತವಾದ ರಚನೆಗಳು ಭೈರವದ 'ಗಾಂವ್ರೂ ತೋರೆ ಸಂಗ', ಜೋಗದ 'ರೂಮಝೂಮ ಬಾದಲ', ಮಾರವಾದ 'ಏರಿ ಲರೂಂಗಿ ಆಜ ಪಿಯಾ ತೋಸೆ', ಮುಂತಾದವುಗಳು. ಯಾವ ಖಟ್ಕಾ, ಫಿರತಗಳಿಲ್ಲದೆ ಬರಿಯ ಸ್ವರ ಪ್ರತಿಮೆಯನ್ನು ಪ್ರತಿಪಾದಿಸುವ ಬಂದಿಶ ಸೋಹೋನೀಯ 'ಭೂಲನಾ ಪಾಊ ಸಜನುವಾ'. ತೀನತಾಲದ ಹನ್ನೊಂದನೆಯ ಮಾತ್ರೆಯಿಂದ ಶುರುವಾಗುವ ಅಪರೂಪದ ಬಂದಿಶ ಭೀಮಪಲಾಸೀಯ 'ಝೂಟಿ ಬತಿಯಾ ನಾ ಕರೋಜಿ' ಎಂಬುದು. ಮಧ್ಯಲಯವನ್ನು ಅನುಭವಿಸಲೆಂದೇ ರಚಿತವಾದ ಬಂದಿಶ ನಾಯಕಿ ಕಾನಡಾದ 'ಕೈಸೀ ಯೇ ರೀತ ತೋರಿ'. ಗೌಡಮಲ್ಹಾರದ ಚತುರಂಗ ಶೈಲಿಯ ರಚನೆಯಾದ 'ದಿಮಿತ ದಿಮಿತ ನಾಚೇ'ಯಲ್ಲಿ ಗಾಂಧಾರದ ಎರಡೂ ರೂಪಗಳನ್ನು (ಎಂದರೆ ಕೋಮಲ ಗ, ಶುದ್ಧ ಗ) ಬಳಸಲಾಗಿದೆ. ಇದರಿಂದಾಗಿ ಗೌಡಮಲ್ಹಾರದ ಇನ್ನೊಂದು ರೂಪದ ದರ್ಶನವಾಗುತ್ತದೆ. ರಾಗ ಕೇದಾರನಂದಾದಲ್ಲಿ ಕೇದಾರ ಹಾಗೂ ನಂದ ರಾಗಗಳಲ್ಲಿ, ಮಧ್ಯಮದ ಪ್ರಾಧಾನ್ಯತೆ ಹಾಗೂ ಅದರ ತಿರುವಿನ ತೀವ್ರತೆಗಳು ತೆರೆದುಕೊಳ್ಳುತ್ತವೆ. 'ಜಬಸೆ ದೇಖಿ ಸಿಯಾ ಅಕುಲಾಯರಿ' ಎಂಬ ಬಂದಿಶ, ರಾಗ ಲಂಕಾದಹನ ಸಾರಂಗದಲ್ಲಿಯ ಮೃದುತ್ವವನ್ನು ಸ್ಪಷ್ಟವಾಗಿ ತೋರಿಸುತ್ತದೆ. ಇಲ್ಲಿ, ವೃಂದಾವನೀ ಸಾರಂಗದಲ್ಲಿ ಕೋಮಲ ಗಾಂಧಾರದ ಪ್ರಯೋಗದಿಂದ, ಅದರಲ್ಲಿಯ ಗಾಂಭೀರ್ಯದ ತೀವ್ರತೆಯಡಗಿ, ಕೋಮಲತೆಯ ಭಾವನೆಯನ್ನು ಹೊತ್ತು ಅದುವೇ ಹೇಗೆ ಲಂಕಾದಹನ ಸಾರಂಗವಾಗುತ್ತದೆ ಎಂಬುದನ್ನು ಸಂವೇದನಾ-ಶೀಲನೊಬ್ಬ ಅನುಭವಿಸಬಹುದು. ಬಿಹಾಗಡಾ ರಾಗದಲ್ಲಿ ಜೈಪುರ ಘರಾನಾ ಸಂಪ್ರದಾಯದ ಬಂದಿಶಗಳಿವೆ. ದರ್ಬಾರಿ ಕಾನಡಾದ 'ಸುಂದರ ಶ್ಯಾಮ ಸಲೋನೆ', ಪುರಿಯಾದ 'ಮೃಗನಯನೀ ತೋರೆ ನೈನಾ' ಇವುಗಳು ಪಂಜಾಬ ಘರಾನಾ ಶೈಲಿಯನ್ನು, ಮಧುವಂತಿಯ 'ತುಮಬಿನ ತರಸ ರಹೀ ಹೂಂ' ಇದು ಆಗ್ರಾ ಘರಾನಾ ಶೈಲಿಯನ್ನೊಳಗೊಂಡಿವೆ. ರಾಗದ ಒಂದು ನಿಗದಿತ ರೂಪದಲ್ಲಿಯ 'ಒಂದೇ ಸ್ವರಬಂಧಗಳು' ಬೇರೆ ಬೇರೆ ತಾಳ ಲಯಗಳನ್ನೊಳಗೊಂಡು ಸಾಹಿತ್ಯದ ಆರೋಪವಾದಾಗ ಭಿನ್ನ ಸ್ವರೂಪ ಹೊಂದುತ್ತವೆ ಎಂಬ ಅಂಶವನ್ನರುಹಲು, ಕಲ್ಯಾಣದ 'ರೂಪ ಗುಣ ಗಾಂಊ' ಹಾಗೂ 'ಲಾಲ ಮೇರೋ ನಾ ಆಯೋರಿ' ಗಳಿವೆ. ಶುದ್ಧ ಸಾರಂಗದಲ್ಲಿಯ 'ತಪರೀಯಾ ಭೂಮರಿ', ವೃಂದಾವನೀ ಸಾರಂಗದಲ್ಲಿಯ 'ಘನಘೋರ ಛಾಯೀ ಘಟಾ', ಮಿಯಾಮಲ್ಹಾರದ 'ಐಸೋ ಕೈಸೋ ಬರಸೆ ಬದರಿಯಾ', ಮುಂತಾದ ಬಂದಿಶಗಳು ಋತುಗಳ ವರ್ಣನೆಯನ್ನು ಸ್ವರಗಳ ಮುಖೇನವೂ ನೀಡುತ್ತವೆ. ಪುರಿಯಾ ಧನಾಶ್ರೀಯ 'ಸೂರಜ ಡುಬ ಗಯೋರಿ' ಸಂಧ್ಯಾಕಾಲದ ವರ್ಣನೆಯನ್ನೂ, ಬಿಭಾಸದಲ್ಲಿಯ 'ರೈನ ಬೀತ ಗಯೀ' ಬೆಳಗಿನ ವರ್ಣನೆಯನ್ನೂ ನೀಡುತ್ತವೆ. ಚಂದ್ರಕೌಂಸದ 'ಶರದ ಕೀ ರಾತ ಚಾಂದ ಚಮಕಾ' ಇದು ಶರದ್ರಾತ್ರೆಯ ವರ್ಣನೆಯನ್ನು ಮಾಡುತ್ತದೆ. ಹೀಗೆಯೇ ಅನೇಕ ಬಂದಿಶಗಳು, 'ಬೇರೆ ಬೇರೆ ಮಾತ್ರೆಗಳಿಂದ ಶುರುವಾದರೆ, ಜೋಲಿಯೂ ಹೇಗೆ ಬದಲಾಗುತ್ತದೆ' ಎಂಬ ಅಂಶವನ್ನು ತೋರಿಸುತ್ತವೆ. ಇವರ ಪ್ರತಿಯೊಂದು ರಚನೆಯೂ ರಾಗಗಳ ಹೊಸ ಹೊಸ ರೂಪಗಳನ್ನು ತೋರಿಸುವ ಪ್ರಯತ್ನ ಮಾಡುತ್ತದೆ.

ಬಂದಿಶಗಳ ರಚನೆಯನ್ನು, ಅವುಗಳ ನಿರ್ಮಿತಿ ವಾದತತ್ವ (structural theory)ವನ್ನು ಪ್ರತಿಪಾದಿಸುವ ತರಾನಾ ರಚನೆಗಳು, ಪಂಡಿತರಿಂದ ಅನೇಕ ರಾಗಗಳಲ್ಲಿ ರಚಿತವಾಗಿವೆ. ತರಾನಾ ಎಂಬುದು ಸಂಗೀತದಲ್ಲಿರಬಹುದಾದ 'extremes exist at same point'ಎಂಬ ವಿಶಿಷ್ಟ ಗುಣವನ್ನು ಹೊರಗೆಡಹುವ ಮಾಧ್ಯಮ. ಇಲ್ಲಿ ಯಾವುದೇ ಭಾವಾರ್ಥವಿರುವ ಸಾಹಿತ್ಯಿಕ ಅಂಶಗಳನ್ನು ಹೊಂದಿದ ಶಬ್ದಗಳ ಆರೋಪವಿರದ ಕಾರಣ, ಇದು ಸಂಗೀತದ ಕೈವಲ್ಯ ರೂಪ ಅಥವಾ ಆತ್ಮ ತತ್ವವನ್ನೇ ಪ್ರತಿನಿಧಿಸುತ್ತದೆ. ರಾಗ ರೂಪ, ಸ್ವರ ಸಂಬಂಧ, ಲಯದಲ್ಲಿಯ ವಿವಿಧತೆಗಳನ್ನು ಆತ್ಯಂತಿಕವಾಗಿ ಅನುಭವಿಸಲು ಅನುಕೂಲತೆಯನ್ನು ಕಲ್ಪಿಸುತ್ತದೆ. ರಾಗ ಶಂಕರಾದ ತರಾನಾದ ವಿಶೇಷತೆಯೆಂದರೆ ಇದನ್ನು ಏಕತಾಲ ಹಾಗೂ ತೀನತಾಲಗಳೆರಡರಲ್ಲೂ ಹಾಡಬಹುದು. ಭೂಪ, ಶ್ಯಾಮ ಕಲ್ಯಾಣ, ನಂದ ಮುಂತಾದ ರಾಗಗಳ ತರಾನಾಗಳಲ್ಲಿ ನೃತ್ಯದಲ್ಲಿಯ

ನಾಟ್ಯದ ನಡೆಗಳನ್ನು ಕಾಣಬಹುದು. ಭೀಮಪಲಾಸೀಯ ತರಾನಾ ಸ್ವರಭಾವದಲ್ಲಿ ಸಮೃದ್ಧವಾಗಿದೆ. ಕಲ್ಯಾಣದಲ್ಲಿಯ ತರಾನಾ ಮಧ್ಯಲಯದಲ್ಲಿ ಸ್ವರ ಶ್ರೀಮಂತಿಕೆಯಿಂದ ಕೂಡಿ ಗಾಂಭೀರ್ಯನಡೆಯಲ್ಲಿ ಸಾಗುತ್ತದೆ. ಕಲ್ಯಾಣದ ಟಪ್ ತರಾನಾ, ಟಪ್ಪಾ ಅಂಗದ ಗಾಯನಪದ್ಧತಿಯ ಪ್ರಯೋಗವನ್ನು ತರಾನಾದಲ್ಲಿ ಮಾಡಿದಂತಾಗಿದೆ.

ಪಂಡಿತರು ರಚಿಸಿದ ಟಪ್ಪಾ ಶೈಲಿಯ 'ಮುರಲೀ ಬೈರನ ಭಯೀ ಸಖಿರೀ' ಎಂಬ ಬಂದಿಶ 'ಸಖಿ, ಕೃಷ್ಣನ ಅಧರಗಳ ಸಂಗವನ್ನು ಮಾಡಿ ಅವನೊಂದಿಗೆ ಪ್ರೀತಿಯಿಂದ ಮಾತನಾಡಿದ ಕೊಳಲು ನನ್ನ ವೈರಿಯಾಗಿದೆ' ಎಂಬ ಅರ್ಥವನ್ನು ಹೊಂದಿದೆ. ಶೃಂಗಾರ ರಸದ ಕಲ್ಪನೆಯೇ ಇದಾದರೂ ಇದರಲ್ಲಿ ಅದೆಂತಹ ಉದಾತ್ತ ಭಾವವಿದೆ, ಅಭಿಜಾತತೆಯಿದೆ. ಪಂಡಿತರು ಹಲವು ಠುಮ್ರಿ ಶೈಲಿಯ ಬಂದಿಶಗಳನ್ನೂ ರಚಿಸಿದ್ದಾರೆ. ಮಾಂಝಖಮಾಜದ 'ನೈಯ್ಯಾ ಮೋರಿ ಕೈಸೇ ಲಾಗೆ ಪಾರ' ಎಂಬ ರಚನೆಯ ವೈಶಿಷ್ಟ್ಯವೆಂದರೆ, ಇದು ಭಕ್ತಿರಸವನ್ನು ಹೊಂದಿದೆ. ಹೆಚ್ಚಾಗಿ ಠುಮ್ರಿಯಲ್ಲಿಯ ಭಾವ, ಶೃಂಗಾರ ರಸಕ್ಕೆ ಸಂಬಂಧಿಸಿದ್ದಿರುತ್ತದೆ. ಆದರೆ ಠುಮ್ರಿಯನ್ನು ಭಕ್ತಿರಸದಲ್ಲಿಯೂ ಬರೆಯುವ ಪ್ರಯತ್ನವನ್ನು ಇವರು ಮಾಡಿದ್ದಾರೆ. ನಾನು ಪಿಲು(ಖಮಾಜ ಅಂಗ) ರಾಗದ ಧಾಟಿಯಲ್ಲಿ ಹಾಡುತ್ತಿದ್ದ ಪುರಂದರದಾಸರ 'ಆಡಿಸಿದಳೆಶೋದಾ'ಎಂಬ ಭಕ್ತಿಗೀತೆಯಿಂದ ಪ್ರಭಾವಿತರಾದ ಪಂಡಿತರು, ನನಗೆ ಈ ರಾಗದ ಸಮಗ್ರ ಪರಿಚಯವನ್ನು ಮಾಡಿಕೊಡಬೇಕೆಂದುಕೊಂಡರು. ಸುಗಮ ಸಂಗೀತದ ಪ್ರಸ್ತುತಿಯಲ್ಲಿ ನನಗಿರುವ ಭಾವಸಮೃದ್ಧತೆಯನ್ನು, ಶಾಸ್ತ್ರೀಯ ಸಂಗೀತದ ಪ್ರಸ್ತುತಿಯಲ್ಲೂ ತರಲು ಸಹಕರಿಸಲು ಇದೇ ರಾಗದಲ್ಲಿ ಠುಮ್ರಿ ಶೈಲಿಯ ಬಂದಿಶೊಂದನ್ನು ರಚಿಸಿದರು.

ಶ್ರೀ ನಾರಾಯಣ ಪಂಡಿತರ ರಚನೆಗಳನ್ನು ಅವರಿಂದಲೇ ಕಲಿಯುವ ಭಾಗ್ಯ ನನ್ನದಾದಾಗ, ಸಹೃದಯೀ ಸಂಗೀತಾಸಕ್ತರಿಗೂ ಇದು ಲಭ್ಯವಾಗುವ ಕಾರ್ಯದಲ್ಲಿ ನನ್ನನ್ನು ತೊಡಗಿಸಿಕೊಂಡು, ತತ್ಮುಖೇನ ನನ್ನ ಕಲಿಯುವಿಕೆಯ ಗತಿಯನ್ನು ಹೆಚ್ಚಿಸಿಕೊಳ್ಳುವ ನನ್ನ ಯೋಚನೆಯನ್ನು ಪಂಡಿತರ ಮುಂದಿಟ್ಟೆ. 'ನನಗೆ ನನ್ನ ರಚನೆಗಳು ಪ್ರಕಾಶನ ಕಾಣುವುದು ಮುಖ್ಯ ಅಲ್ಲ. ಮೇರು ಕೃತಿಗಳು ನಮ್ಮಲ್ಲಿ ರಸ್ತೆ ಬದಿಯಲ್ಲಿ ನಾಲ್ಕಾಣೆಗೆ ಮಾರಾಟವಾಗಿದ್ದನ್ನು ನಾನು ನೋಡಿದ್ದೇನೆ. ಸಂಗೀತದಲ್ಲಿ ನಾನು ತಿಳಿದುಕೊಂಡ ವಿಚಾರ ಶುದ್ಧರೂಪದಲ್ಲಿ ನೀನು ಕಲಿಯುವುದು ಮುಖ್ಯ' ಎಂದು ಕಡ್ಡಿ ಮುರಿದಂತಾಡಿಬಿಟ್ಟರು. ತತ್ಕ್ಷಣ ಮೆತ್ತಗಾಗಿ 'ಏನೇ ಮಾಡಿದರೂ ಕೊನೆಗೆ ನಮ್ಮ ಯೋಗ್ಯತೆಯ ಪರೀಕ್ಷೆಯಾಗುವುದು ವೇದಿಕೆಯ ಮೇಲೆಯೇ. ಪ್ರದರ್ಶನಾ ತಾಂತ್ರಿಕತೆಗಳ ಸಾಧನೆಗೆ ಯಾವುದೇ ತೊಂದರೆ ತಂದುಕೊಳ್ಳದೆ ಮಾಡ್ತಿಯಾದರೆ ಮಾಡು. ನಿನಗೆ ಸಂಪೂರ್ಣ ಸ್ವಾತಂತ್ರ್ಯವಿದೆ. ನನ್ನ ಬೆಂಬಲವೂ ಇದೆ ಮತ್ತೆ' ಎಂದು ತಮ್ಮ ರಚನೆಗಳ ಸಂಪೂರ್ಣ ಕಟ್ಟನ್ನು ನನ್ನ ಕೈಲಿಟ್ಟರು.

ಕಲಿಯುವಿಕೆಯಲ್ಲಿ ನನಗಿದ್ದ ಒಲವನ್ನು ಗುರುತಿಸಿ ಪಂಡಿತರಂತಹ ಮಹಾನುಭಾವರು, ಧಾರವಾಡದ ನನ್ನ ನಿವಾಸ 'ಶುಭಾಂಗಿ'ಯಲ್ಲಿ ಹಲವು ದಿನ ನೆಲೆಸಿ, ನನಗೆ ಹಿಂದುಸ್ತಾನೀ ಸಂಗೀತದಲ್ಲಿಯ ಹಲವು ಸೂಕ್ಷ್ಮ ವಿಚಾರಗಳ ಜೊತೆ ಜೊತೆಗೇ ಸುಂದರ ಬಂದಿಶಗಳನ್ನು ಧಾರೆ ಎರೆಯುತ್ತಿರುವುದು ನನ್ನ ಹಿರಿಯರ ಆಶೀರ್ವಾದದ ಫಲವೆಂದುಕೊಳ್ಳುತ್ತೇನೆ. ಈ ಸಮಯದಲ್ಲಿ, ಪುಟ್ಟ ಮಕ್ಕಳಿಗೆ ಯಾವುದೇ ರಾಗದ, ತಾಳದ ಕಲ್ಪನೆಯನ್ನು ನೀಡದೆ ಸ್ವರ ಲಯ ಭಾವಗಳಿಂದ ಕೂಡಿದ ಬಂದಿಶನ್ನು ಸಹಜವಾಗಿ ಕಲಿಸಿದರೆ, ಅದು ಅವರ ಕಲಿಯುವಿಕೆಯ ವೇಗದಲ್ಲಿ ಹೆಚ್ಚಿನ ಪರಿಣಾಮ ನೀಡುತ್ತದೆ ಎಂಬ ತಮ್ಮ ವಿಚಾರಕ್ಕೆ ಒತ್ತು ನೀಡಿ, ನನ್ನ ಪುಟ್ಟ ಮಗಳು ದುರ್ಗಾಳಿಗಾಗಿ 'ಶ್ಯಾಮ ಸುಂದರ ಮದನ ಮೋಹನ' ಎಂಬ ಭೈರವಿಯ ಬಂದಿಶ ರಚಿಸಿ ಕಲಿಸಿದರು. ಕೆಲವು ಅಪ್ರಚಲಿತ ರಾಗಗಳ ಅವರ ಬಂದಿಶಗಳನ್ನು ರಾಗದ ಯಾವುದೇ ಮಾಹಿತಿ ತಿಳಿಯದ ಅವಳು ಸಹಜವಾಗಿ ಹಾಡುತ್ತಾಳೆ. ನನ್ನ ಜೀವನ ಪದ್ಧತಿಯನ್ನು ನೋಡುತ್ತಾ ಪಂಡಿತರು ನಾನು ಪ್ರೀತಿಯಿಂದ ಹಾಡುವ ಬೈರಾಗಿ ಭೈರವದ ಎರಡು ಬಂದಿಶಗಳನ್ನು ರಚಿಸಿ ನನಗೆ ಕಲಿಸಿದರು. ಪಂಡಿತರಿಗೆ ಅಷ್ಟೊಂದು ಒಲವಿರುವ ರಾಗ ಇದಲ್ಲವೆಂಬುದು ಅವರ ಹೇಳಿಕೆ. ಆದರೂ ಇದರ 'ಅಕೇಲಿ ಮೈ ರಾಹಿ' ಹಾಗೂ 'ಡಗರ ಚಲತ' ಎಂಬ ಬಂದಿಶಗಳು ರಚನಾತ್ಮಕವಾಗಿ

ಸುಂದರವಾಗಿವೆ. 'ಅಕೇಲಿ ಮೈ ರಾಹಿ' ಎಂಬ ರಚನೆ 'ಯಾವುದೇ ವಿದ್ಯಾರ್ಥಿ ಅಥವಾ ಸಾಧಕ'ನ ಜೀವನದ ರೀತಿಯ ಬಗ್ಗೆ ಹೇಳುತ್ತದೆ. ನಾನು ಜೀವನದ ರಸ್ತೆಯಲ್ಲಿ ಒಂಟಿ ಪಯಣಿಗನೆಂಬ ಧೀರ ನಿಲುವಿನ ಅರ್ಥ ಇದರಲ್ಲಡಗಿದೆ. ಏಕತಾಲದ ದೃತ ಲಯದಲ್ಲಿ ರಚಿತವಾದ 'ಡಗರ ಚಲತ' ವೆಂಬ ರಚನೆಯಲ್ಲಿ 'ಜೀವನದ ಮೈಲಿಗಲ್ಲುಗಳನ್ನು ದಾಟುತ್ತಾ ನಿನ್ನಿಂದ (ಗುರುವನ್ನು ಸಂಬೋಧಿಸಿ) ರಚಿತವಾದ ಗೀತೆಗಳನ್ನು ಹಾಡುತ್ತೇನೆ; ನಾದಪಿಯಾ, ಭಾವಮಯವಾದ ರೂಪಗಳಿಂದ ಕೂಡಿದ ನಿನ್ನ ಅಭಿನವ ಗೀತೆಗಳನ್ನು ಹಾಡುತ್ತೇನೆ' ಎಂಬ ಅರ್ಥವಿದೆ. ಒಟ್ಟಾರೆ ನೋಡಿದಾಗ, ಪಂಡಿತರ ರಚನೆಗಳಲ್ಲಿ ಮಾನವನ ಜೀವನ ಪದ್ಧತಿ, ಭಾವನಾತ್ಮಕ ಸಂಬಂಧಗಳು, ವಯಕ್ತಿಕ ಭಾವನೆಗಳು, ಶರಣಾಗತ ಭಾವಗಳು, ವಿರಕ್ತಿ, ನಿಸರ್ಗದ ವರ್ಣನೆ, ಸಂಗೀತದಲ್ಲಿಯ ವರ್ಣನೆ, ಹೀಗೆಯೇ ಜೀವನದ ಹತ್ತು ಹಲವಾರು ಮಜಲುಗಳು ತೆರೆದುಕೊಳ್ಳುತ್ತವೆ. ಪ್ರತಿಯೊಂದು ರಚನೆಯಲ್ಲೂ ರಾಗದ ವ್ಯವಸ್ಥಿತ ವಿಕಾಸ, ಅದರ ಬೇರೆ ಬೇರೆ ರೀತಿಯ ಪ್ರಯೋಗಗಳನ್ನು ಕಾಣಬಹುದು. ಹೊಸ ಹೊಸ ಭಾವನೆಗಳ ವಿಕಾಸಕ್ಕೆ ಅನುಕೂಲಕರವಾದ, ಎಂಭತ್ತೆರಡು ರಾಗಗಳ ಶ್ರೀ ನಾರಾಯಣ ಪಂಡಿತ ವಿರಚಿತ ನೂರೈವತ್ತೈದು ಬಂದಿಶಗಳ ಸಂಗ್ರಹವೇ 'ಅಭಿನವಭಾವ ಬಂದಿಶ' ಆಗಿರುತ್ತದೆ. ಇದರಲ್ಲಿ, ವಿದ್ವನ್ಮಣಿಗಳೆದುರು ಪ್ರದರ್ಶಿಸಬಹುದಾದ, ಪಾಮರರಿಗೂ ಹಿತವೆನಿಸುವ, ನಮ್ಮ ಆನಂದಕ್ಕಾಗಿಯೇ ಹಾಡಿಕೊಳ್ಳಬಹುದಾದ ಅನೇಕ ಬಂದಿಶಗಳಿವೆ. ಇವರ ಅನೇಕ ರಚನೆಗಳು 'ನಾದಪಿಯಾ' ಎಂಬ ಇವರ ಕಾವ್ಯನಾಮವನ್ನು ಹೊಂದಿವೆ. ಇನ್ನೂ ಅನೇಕ ರಚನೆಗಳಲ್ಲಿ ಸಾಹಿತ್ಯಕ್ಕೆ ಅಪಚಾರವಾಗಬಾರದೆಂಬ ದೃಷ್ಟಿಯಿಂದ ಪಂಡಿತರು ತಮ್ಮ ಕಾವ್ಯನಾಮವನ್ನು ಬಳಸಿಲ್ಲ.

ಆತ್ಮೀಯ ಕಲಾಬಂಧು,

ಚಿಕ್ಕಂದಿನಿಂದಲೂ ಅಭಿನಯ, ನೃತ್ಯ, ಗಾಯನ ಮುಂತಾದ ಲಲಿತಕಲೆಗಳಲ್ಲಿ ಉತ್ಸ್ಫೂರ್ತಿಯಿಂದಲೇ ಪಾಲ್ಗೊಳ್ಳುತ್ತಾ ಬಂದು, ಹದಿನೆಂಟು ವರ್ಷಗಳ ಹಿಂದೆ ಹಿಂದುಸ್ತಾನೀ ಶಾಸ್ತ್ರೀಯ ಸಂಗೀತ ಪ್ರಪಂಚಕ್ಕೆ ಬಹು ತವಕದಿಂದ ಅಂಬೆಗಾಲಿಟ್ಟ ಪುಟ್ಟ ಜೀವ ನನ್ನದು. ಶ್ರೀ ನಾರಾಯಣ ಪಂಡಿತರು ತಮ್ಮ ರಚನೆಗಳನ್ನು ನನ್ನ ಕೈಗಿತ್ತು ಆಶೀರ್ವದಿಸಿದಾಗ, ನಾನು ಈ ಕೆಲಸಕ್ಕೆ ಕೈ ಹಾಕುವ ವಿಚಾರ ಪಂ. ಚಂದ್ರಶೇಖರ ಪುರಾಣಿಕಮಠರ ಬಳಿ ಅರುಹಿದೆ. 'ಶಾರದಾ, ಈ ಕೆಲಸ ನಿನ್ನಿಂದಲೇ ಆಗಬೇಕಾಗಿದೆ, ಆಗುತ್ತದೆ' ಎಂದು ಹೇಳಿ ತುಂಬು ಹೃದಯದಿಂದ ಆಶೀರ್ವದಿಸಿ ಪ್ರೋತ್ಸಾಹಿಸಿದರು. ಅಂದಿನಿಂದ ಮುಂದೆ ಪಂಡಿತರು ಹೇಳುತ್ತಿದ್ದ ವಿಚಾರಗಳನ್ನು ವ್ಯವಸ್ಥಿತ ರೀತಿಯಲ್ಲಿ ಬರೆದಿಟ್ಟುಕೊಳ್ಳತೊಡಗಿದೆ. ಅವುಗಳ ಬಗೆಗೆ ಚಿಂತನೆ ನಡೆಸಿದೆ. ಪಂಡಿತರು ಭಾತಖಾಂಡೆಯವರ ಸ್ವರಲಿಪಿ ಪದ್ಧತಿಯಲ್ಲಿ ಬರೆದ ಅವರ ಬಂದಿಶಗಳನ್ನು, ನಾನು ಗಣಕಯಂತ್ರದಲ್ಲಿ ದಾಖಲಿಸ ಹೊರಟಾಗ ಬಹಳ ತೊಂದರೆಯಾಯಿತು. ಕೋಮಲ, ತೀವ್ರ ಸ್ವರಗಳ ಅಕ್ಷರಗಳನ್ನು ಅಳವಡಿಸುವುದು ಅಸಾಧ್ಯವೇ ಆಯಿತು. ಅಲ್ಲಿಂದ ಒಂದು ವರ್ಷದ ಪ್ರಯತ್ನಗಳ ನಂತರ, ನಾನೇ ಒಂದು ಸುಲಭೀಕೃತ 'ಸ್ವರಲಿಪಿ' ಪದ್ಧತಿಯ ಬಗ್ಗೆ ವಿಚಾರಮಾಡಿ, ನನ್ನ ಸಂಗೀತ ಗುರುಗಳಾದ ಪುರಾಣಿಕಮಠರು ಹಾಗೂ ಪಂಡಿತರ ಮುಂದಿಟ್ಟೆ. ಅವರೂ ಅದನ್ನು ನೋಡಿ ಆನಂದಪಟ್ಟರು. ಪಂಡಿತರು ತಮ್ಮ ಬಂದಿಶಗಳನ್ನು, ಈ ಹೊಸ ಸುಲಭೀಕೃತ ಸ್ವರಲಿಪಿಯಲ್ಲೇ ಅಳವಡಿಸಿ ಪ್ರಸ್ತುತಪಡಿಸಲು ಅನುಮೋದಿಸಿ ಉತ್ತೇಜನ ನೀಡಿದರು. ಆದ್ದರಿಂದ ಹೊಸದಾದ ಸ್ವರಲಿಪಿಯಲ್ಲಿ 'ಅಭಿನವಭಾವ ಬಂದಿಶ'ನಲ್ಲಿಯ ರಚನೆಗಳನ್ನು ಬರೆಯಲಾಗಿದೆ. ಪಂಡಿತರೇ ಹೇಳುವಂತೆ 'ನಾವು ಏನೇ ಕೆಲಸ ಮಾಡಿದರೂ, ಅದಕ್ಕೊಂದು ಅರ್ಥವಿದ್ದಾಗ, ಅದರಲ್ಲಿ ನವೀನತೆ ಕಾಣುತ್ತದೆ' ಎಂಬ ಅಂಶವನ್ನು, ಈ ಗ್ರಂಥದಲ್ಲಿ ಮೊದಲಿನಿಂದ ಕೊನೆಯವರೆಗೂ ಕಾಣಬಹುದು.

ಈ ಬಂದಿಶಗಳನ್ನು ಸುಂದರವಾಗಿ ಪ್ರಸ್ತುತಪಡಿಸಲು, ಪಂಡಿತರು ನನಗೆ 'ಕಂಠ ಹಾಗೂ ಸ್ವರದ ಜೊತೆ ಗೆಳೆತನ ಬೆಳೆಸಲು' ಹೇಳಿದ ಕೆಲವು ಸೂಚನೆಗಳನ್ನು ನಾನಿಲ್ಲಿ ಹಂಚಿಕೊಳ್ಳದಿದ್ದರೆ ನನ್ನ ಈ ಲೇಖನ ಅಪೂರ್ಣವಾಗುತ್ತದೆ. "ಹಾಡುವಾಗ ನಮಗೆ ಬೇಕಾದ ಮಾಧ್ಯಮ ಕಂಠ. ನಮ್ಮಲ್ಲಿ ಹೆಚ್ಚಾಗಿ ಸಂಗೀತದ ವ್ಯಾಕರಣ ಕಲಿಸಿಹೋಗುತ್ತದೆ. ಆದರೆ ಅದರ ಭಾವಾಭಿವ್ಯಕ್ತಿಗೆ

ಬೇಕಾದ ಹಾಗೆ ಧ್ವನಿಯ ಸಂಸ್ಕರಣೆ ಬಗ್ಗೆ ಕಲಿಕೆ ಇರುವುದಿಲ್ಲ. ಕಂಠಗುಣವನ್ನು ಸರಿಯಾಗಿ ಬಳಸಿಕೊಂಡು, ಸ್ವರವನ್ನು ಅನುಭವಿಸಲು, ಮೊದಲು ಸ್ವರ ಹೊರತೆಗೆಯುವಾಗ ಗಮಕ ಬರಬಾರದು. ಆಯಾ ಸ್ವರಗಳನ್ನು ಸರಳವಾಗಿ ಹಿಡಿಯಲು ಬರಬೇಕು. ಸ್ವರ ಒಡೆಯದೆ ಶಬ್ದ ಉಚ್ಚರಿಸಲು ಮೊದಲು ವ್ಯಂಜನ ಬರಬಾರದು. ಸ್ವರದ ಮೇಲೆ ತೇಲುವುದು, ಸ್ವರದೊಳಗೆ ಇಳಿಯುವುದು, ಸ್ವರವನ್ನನುಭವಿಸುವ ಪ್ರಕ್ರಿಯೆ ಬರಬೇಕು. ಒಂದು ಸ್ವರದ ಮೇಲೆ ನಿಂತು ಅದನ್ನು ನೋಡಿ ಮುಂದೆ ಹೋಗಬೇಕು. ಹಾಗೆ ಮುಂದೆ ಹೋಗುವಾಗ, ಗಡಿಬಿಡಿ ಅಥವಾ ರಾಗಲೋಪದ ಭಯವಿರಬಾರದು. ಒಂದು ಸ್ವರದಿಂದ ಇನ್ನೊಂದು ಸ್ವರಕ್ಕೆ ಹೋಗುವಾಗ continuity ಇರಬೇಕು. ಇದು ಲಗಾವ್ ನಿಂದ ಮಾತ್ರ ಸಾಧ್ಯ. ಲಗಾವ್ ಎಂದರೆ ಹಿಂದಿನ ಸ್ವರವನ್ನು ಮುಟ್ಟಿ ಮುಂದಿನ ಸ್ವರಕ್ಕೆ ಹೋಗುವುದು. ಶಬ್ದಪ್ರಯೋಗದಲ್ಲಿ ಸ್ವರವನ್ನೊಡೆಯದೆ ಮೃದುವಾದ ಅಲೆಗಳು ಬರಬೇಕು. ತಾನುಗಳಲ್ಲಿ ಚುರುಕುತನವಿರಲು ಧ್ವನಿಯನ್ನು ಹಗುರ ಮಾಡಿಕೊಳ್ಳಬೇಕು. ಪ್ರತಿಬಾರಿಯೂ ದೊಡ್ಡ volumeನಲ್ಲಿ, ಗಟ್ಟಿಯಾಗಿ ಹಾಡಲೇಬೇಕೆಂದಿಲ್ಲ. ಭಾವಕ್ಕೆ ತಕ್ಕಂತೆ ಹಾಡಲು ಚಿಂತನೆ ಬೇಕು, ಮನಸ್ಸಿನ ಹದ ಬೇಕೇ ಬೇಕು'.

೨೦೦೭ರ ಪ್ರಾರಂಭದಲ್ಲಿ, ಧಾರವಾಡದಲ್ಲಿ 'ಅವನಿ' ಹಾಗೂ 'ಫ್ರೋಬಸ್ ಕ್ಲಬ್' ಗಳಲ್ಲಿ ಪಂಡಿತರು ನೀಡಿದ ಈ ಮೇಲಿನ ಧ್ವನಿ ಸಂಸ್ಕರಣೆಯ ಸೂಚನೆಗಳನ್ನು ಉಪಯೋಗಿಸಿ, ಪಂಡಿತರ ಕೆಲವು ಬಂದಿಶಗಳನ್ನೂ ಹಾಡಿ ಸಂಗೀತ ಕಾರ್ಯಕ್ರಮಗಳನ್ನು ನೀಡಿದ್ದೆ. ಸಂಗೀತ ಕಾರ್ಯಕ್ರಮ ಮುಗಿದಾಗ ಶ್ರೋತೃಗಳು ಆನಂದದಲ್ಲಿ ಶಾಂತ ಮನಸ್ಥಿತಿಯಲ್ಲಿದ್ದರು. ಅಂದರೆ ಸ್ವಲ್ಪ ಸಮಯ ಭಾವಸ್ಪಂದನದ ಗುಂಗಿನಲ್ಲಿಯೇ ಮುಳುಗಿದ್ದರು. ನನಗೂ, ನನ್ನ ಶ್ರೋತೃಗಳಿಗೂ ಒಂದು ದಿವ್ಯ ಪೂಜೆಯನ್ನು ಪೂರ್ತಿಯಾಗಿಸಿದ ಅನುಭವ.

'ಪ್ರಸೃತಿ' ಎಂಬ ಪದಕ್ಕೆ ಒಂದರ್ಥ 'ಬೊಗಸೆ' ಎಂಬುದು. 'ವಿಶಾಲವಾದ ಜ್ಞಾನ ಜಗತ್ತಿನಲ್ಲಿ, ನಾವು ನಮ್ಮ ಬೊಗಸೆಯಲ್ಲಿ ಹಿಡಿಯಬಹುದಾದಷ್ಟೇ ಜ್ಞಾನ ನಮಗೆ ಲಭ್ಯ' ಎಂಬ ಹಿರಿಯರ ಜಾಣ್ನುಡಿಯನ್ನು ಸ್ಮರಿಸಿ ಪಂಡಿತರ ಬಂದಿಶಗಳ ಬಗೆಗಿನ ಸಂಶೋಧನಾತ್ಮಕ, ರಚನಾತ್ಮಕ ಮರ್ಮವನ್ನು ತೆರೆದಿಡುವ ಪ್ರಯತ್ನ ಮಾಡಿದ್ದೇನೆ. ಇಲ್ಲಿಯ ವಿವರಣೆಗಳು ನನ್ನ ಬೊಗಸೆಯಲ್ಲಿನ ಜ್ಞಾನದ ಮಿತಿಗೇ ಸೀಮಿತವಾದವು. ಪಂಡಿತರು ನಿಃಸ್ವಾರ್ಥದಿಂದ ನನಗಿತ್ತ ತಾನು ರಚಿಸಿದ ಬಂದಿಶಗಳನ್ನು, ಸಂಪಾದನೆ ಮಾಡಿ ಸಂಗೀತಾಸಕ್ತರೊಂದಿಗೆ ಹಂಚಿಕೊಳ್ಳುವ ಪ್ರಾಮಾಣಿಕ ಪ್ರಯತ್ನ ನನ್ನದು. ಈ ಮುಖೇನ ವಾಗ್ಗೇಯಕಾರನೊಬ್ಬನ ಭೂಮಿಕೆಯನ್ನು ಸಮರ್ಥವಾಗಿ ನಿರ್ವಹಿಸಿದ ಗುರುವಿಗೆ, ಪ್ರಬಂಧ ರೂಪದಲ್ಲಿ ಗೌರವ ಸಲ್ಲಿಸುವ ಸದಾವಕಾಶ ನನ್ನದಾಗಿದೆ. ಈ ಸೇವಾರೂಪದಲ್ಲಿ ಸಂಗೀತಶ್ರೀಗೆ, ಗುರು ಶ್ರೀ ನಾರಾಯಣ ಪಂಡಿತರಿಗೆ ಹಾಗೂ ನನ್ನೆಲ್ಲ ಗುರುನಿಕರಕ್ಕೆ, ಭಕ್ತಿಪುರಸ್ಸರವಾದ ನಮನಗಳು.

-ಡಾ. ಶಾರದಾ ವಿ. ಭಟ್ಟ